ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 12
Issue - 9
Pages - 20
₹ - 12
September - 2014



ರಾಷ್ಟ್ರದ ಮಕ್ಕಳನ್ನು ನಾಳಿನ
ಶ್ರೇಷ್ಠ ನಾಗರಿಕರನ್ನಾಗಿ ಮಾಡಿ
ನೆರೆ–ಹೊರೆಯವರೊಡನೆ
ಘನತೆ ಗೌರವಗಳಿಂದ ಬದುಕಿ
ಬಾಳುವಂತೆ ಮಾಡುವುದೇ ಶಿಕ್ಷಣ.
– ಡಾ. ಎಸ್. ರಾಧಾಕೃಷ್ಣನ್

ಸಹಕಾರಿ ಧುರೀಣ, ಆರ್ಥಿಕ ತಜ್ಞ
**ಶ್ರೀ ವಾಜುಭಾಯಿ ರುಡಾಭಾಯಿ ವಾಲಾ**
ಕರ್ನಾಟಕದ ನೂತನ ರಾಜ್ಯಪಾಲ



ಸೌಹಾರ್ದ ಸಹಕಾರಿಗಳ ಸಂಖ್ಯೆ : 2938 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 643

# ಸಂಯುಕ್ತ ಸಹಕಾರಿಯ ನಿರ್ದೇಶಕರ ಚೀನಾ ಪ್ರವಾಸ ಅಧ್ಯಯನ ಯೋಗ್ಯ ಹಾಗೂ ಅನುಕರಣೀಯ



“ನಮ್ಮ ದೇಶದ ಪ್ರಧಾನಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರ ಬಗ್ಗೆ ಹೆಚ್ಚಿನ ಅಭಿಮಾನ ಹೊಂದಿರುವ ಚೀನಿಯರು ಶ್ರೀ ಮೋದಿಯವರು ವಿಶ್ವ ನಾಯಕರಾಗುತ್ತಾರೆ ಎಂದು ಹೆಮ್ಮೆಯಿಂದ ಹೇಳುತ್ತಾರೆ.”

ಆತ್ಮೀಯ ಸಹಕಾರಿ ಬಂಧುಗಳೇ...

ಸಂಯುಕ್ತ ಸಹಕಾರಿಯ ನಿರ್ದೇಶಕರು ದಿನಾಂಕ : 31-7-2014 ರಿಂದ 15-8-2014ರವರೆಗೆ ಚೀನಾ, ಹಾಂಗ್‌ಕಾಂಗ್, ಮಖ್ವಾಯ ಹಾಗೂ ಬ್ಯಾಂಕಾಕ್ ದೇಶಗಳ ಅಧ್ಯಯನ ಪ್ರವಾಸ ಕೈಗೊಂಡಿದ್ದರು. ಈ ಪ್ರವಾಸದ ಅನುಭವಗಳನ್ನು ಸಹಕಾರಿಗಳ ಜೊತೆಗೆ ಹಂಚಿಕೊಳ್ಳದಿದ್ದರೇ ನಮ್ಮ ಪ್ರವಾಸ ಕಾರ್ಯಕ್ರಮ ಪೂರ್ಣವಾಗುವುದಿಲ್ಲ. ಉದ್ದೇಶ ಸಫಲವಾಗುವುದಿಲ್ಲ.

ಭಾರತಕ್ಕೆ ಸ್ವಾತಂತ್ರ ದೊರೆತ ನಂತರ ಚೀನಾಕ್ಕೆ ಅಂದರೆ 1948 ಅಕ್ಟೋಬರ್ 1ಕ್ಕೆ ಸ್ವಾತಂತ್ರ ದೊರೆತಿದೆ. ಇಂದು ಚೀನಾ ದೇಶದ ಜನಸಂಖ್ಯೆ 1.4 ಬಿಲಿಯನ್. ವಿಶ್ವದಲ್ಲೆ ಅತ್ಯಂತ ಹೆಚ್ಚಿನ ಜನಸಂಖ್ಯೆಯಿರುವ ದೇಶ ಚೀನಾ. ಕಳೆದ 15-20 ವರ್ಷಗಳ ಹಿಂದೆಯಷ್ಟೆ ಚೀನಾದ ಜನರಿಗೆ ಬಡತನ ಕಾಡುತ್ತಿತ್ತು. ಆದರೆ ಇಂದು ಚೀನಾ ನಮ್ಮ ಭಾರತಕ್ಕಿಂತ 20 ವರ್ಷಗಳ ಮುಂದೆ ಇದೆ. ವಿಶ್ವದ ಪ್ರಬಲ ರಾಷ್ಟ್ರಗಳಲ್ಲಿ ಒಂದಾಗಿದೆ.

ಎಲ್ಲ ಕ್ಷೇತ್ರಗಳಲ್ಲಿ ತಾಂತ್ರಿಕತೆಯನ್ನು ಅಳವಡಿಸಿ ಆಧುನಿಕ ತಂತ್ರಜ್ಞಾನವನ್ನು ಬಳಸಿ ಕೃಷಿ, ಹೈನುಗಾರಿಕೆ, ಪಶುಸಂಗೋಪನೆ ಶಿಕ್ಷಣ, ಆರೋಗ್ಯ, ಸಾಮಾಜಿಕ ಭದ್ರತೆ, ಪ್ರತಿಯೊಬ್ಬರಿಗೂ ಉದ್ಯೋಗ, ಹಲವಾರು ವಿಧವಾದ ಬೃಹತ್ ಕೈಗಾರಿಕೆಗಳು ಉತ್ತಮ ಗುಣಮಟ್ಟದ ವಸ್ತುಗಳ ತಯಾರಿಕೆ, ಸ್ವಾಭಾವಿಕ ಸಂಪನ್ಮೂಲಗಳ ಗರಿಷ್ಠ ಬಳಕೆ, 24/7 ನಿರಂತರ ವಿದ್ಯುತ ವ್ಯವಸ್ಥೆ, ಸ್ವಚ್ಚತೆಗೆ, ಶಿಸ್ತಿಗೆ, ಸಮಯ ಪಾಲನೆಗೆ ಪ್ರಥಮ ಸ್ಥಾನ, 50 ಕ್ಕಿಂತ ಹೆಚ್ಚಿನ ಗಗನಕ್ಕೆ ಚುಂಬನ ನೀಡುವ ಮಹಡಿಯ ಕಟ್ಟಡಗಳು, ಅಗಲವಾಗಿರುವ ಚತುಷ್ಪಥ ಹಾಗೂ ಷಟ್ಪಥ ಸ್ವಚ್ಛ ಸಂಪೂರ್ಣ ಸಂಚಾರ ವ್ಯವಸ್ಥಿತ ರಸ್ತೆಗಳು, ಕನಿಷ್ಟ 4 ಮಝುಲಿನಿಂದ 11 ಮಝುಲಿನ ವರೆಗಿನ ಫ್ಲೈಓವರುಗಳು, ಪ್ರವಾಸಿಗರ ಆಕರ್ಷಕ ಕೇಂದ್ರಗಳು, ಉತ್ತಮ ಸಾರಿಗೆ ವ್ಯವಸ್ಥೆ ಅದರಲ್ಲೂ ವಿಶ್ವದ ಅತೀವೇಗದ ರೈಲುಗಳು, ಮೇಟ್ರೋ ಟ್ರೇನುಗಳು, ಬುಲ್ಲೆಟ್ ಟ್ರೇನುಗಳು ಹೀಗೆ ಪ್ರತಿಯೊಂದು ವಿಭಾಗದಲ್ಲಿ ವಿಶ್ವದ ನಂ1 ದೇಶವಾಗಿ ವಿಶ್ವದ ಮಾರುಕಟ್ಟೆಯಲ್ಲಿ ಹೆಚ್ಚಿನ ಮನ್ನಣೆ ಇವೆಲ್ಲ ಕೇವಲ 15-20 ವರ್ಷಗಳ ಅವಧಿಯಲ್ಲಿ ಸಾಧಿಸಿರುವುದು ಶ್ಲಾಘನೀಯ ಮತ್ತು ಅನುಕರಣೆಗೆ ಯೋಗ್ಯ.

ಚೀನಾದೇಶದ ಸರ್ಕಾರದ ಸಂಕಲ್ಪಕ್ಕೆ ಸ್ಪಂದಿಸಿದ ಚೀನಾದೇಶದ ಪ್ರಜೆಗಳು ಅಭಿನಂದನೀಯರು. ವಿಶ್ವದ ಮಾರುಕಟ್ಟೆಯಲ್ಲಿ ಅಮೇರಿಕಾದ ಡಾಲರನಷ್ಟೆ ಚೀನಾದ ಯೇನ್‌ಗೆ ಬೆಲೆ ಸಮವಾಗುವ ದಿನವನ್ನು ಎದುರು ನೋಡುತ್ತೇವೆ ಎಂಬುದು ಎಲ್ಲ ಚೀನಿಯರ ಕನಸು ಹಾಗೂ ಸಾಧಿಸುವ ದೃಢ ನಿರ್ಧಾರ. ನಮ್ಮ ದೇಶದ ಪ್ರಧಾನಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರ ಬಗ್ಗೆ ಹೆಚ್ಚಿನ ಅಭಿಮಾನ ಹೊಂದಿರುವ ಚೀನಿಯರು ಶ್ರೀ ಮೋದಿಯವರು ವಿಶ್ವ ನಾಯಕರಾಗುತ್ತಾರೆ ಎಂದು ಹೆಮ್ಮೆಯಿಂದ ಹೇಳುತ್ತಾರೆ. ಇದು ಭಾರತೀಯರ ಹೆಮ್ಮೆ. ಚೀನಿಯರ ದೇಶಾಭಿಮಾನ ಕರ್ತವ್ಯ ಪ್ರಜ್ಞೆ ಸಮಯ ಪ್ರಜ್ಞೆ, ದಕ್ಷತೆ, ಶಿಸ್ತು, ಸ್ವಚ್ಛತೆಗಳನ್ನು ಗೌರವಿಸುವುದರ ಜೊತೆಗೆ ನಾವು ಅವುಗಳನ್ನು ಅನುಕರಿಸಿದರೆ ಅವರಂತೆ ನಾವು ಸಹ ಅಭಿವೃದ್ಧಿ ಹೊಂದಲು ಸಾಧ್ಯ.

**ಗುರುನಾಥ ಜಾಂತಿಕರ,** ಅಧ್ಯಕ್ಷರು

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

**ಒಳ ಪುಟಗಳಲ್ಲಿ . . .**

ಚೀನಾ ದೇಶದ ಅದ್ಭುತ ಸಾಧನೆ: ನೆನಪಿನಲ್ಲಿರಬೇಕಾದ ಪ್ರವಾಸ ........ 4

ಶ್ರೀ ವಾಜುಭಾಯಿ ರುಡಾಭಾಯಿ ವಾಲಾ : ಕರ್ನಾಟಕದ 16ನೇ ರಾಜ್ಯಪಾಲರಾಗಿ ಪ್ರಮಾಣ ವಚನ ........ 6

ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ ನಾಲ್ಕನೇ ಸರ್ವಸದಸ್ಯರ ಸಭೆಯ ಮತ್ತು ಸಾಲುಮರದ ತಿಮ್ಮಕ್ಕನವರ ಸನ್ಮಾನ ಸಮಾರಂಭ ........ 9

ಅರ್ಜಿ ಆಹ್ವಾನ ........ 10

ನವೆಂಬರ್ 1 ಮತ್ತು 2 ಗೋವಾದಲ್ಲಿ ಪತ್ತಿನ ಸಹಕಾರ ಸಂಘಗಳ ಪ್ರಥಮ ಅಧಿವೇಶನ ........ 12

ಸೂರ್ಯ ಸೌಹಾರ್ದ ಸಹಕಾರಿ ನಿಯಮಿತ ಮೈಸೂರು ಇದರ ಪ್ರಥಮ ಸರ್ವ ಸದಸ್ಯರ ಸಭೆ ಹಾಗೂ ಸದಸ್ಯರ ಶಿಕ್ಷಣ ಕಾರ್ಯಾಗಾರ ........ 14

ಸಹಕಾರಿ ಸಂಘಟನೆಗಳಲ್ಲಿ ಪರಿಣಾಮಕಾರಿ ನಾಯಕತ್ವ ........ 17

# ಸಂಪಾದಕೀಯ

## ಸದಸ್ಯ ಜಾಗೃತಿ ಹಾಗೂ ಸದಸ್ಯ ತರಬೇತಿ ಸಹಕಾರಿಯ ಅಭಿವೃದ್ಧಿಗೆ ತಳಹದಿ

ಸಂಯುಕ್ತ ಸಹಕಾರಿಯು ಕಳೆದ ವರ್ಷದಿಂದ ಪ್ರಾರಂಭಮಾಡಿರುವ ಸೌಹಾರ್ದ ಸಹಕಾರಿಗಳ ಸದಸ್ಯ ತರಬೇತಿ ಕಾರ್ಯಕ್ರಮಗಳನ್ನು ಇತ್ತೀಚೆಗೆ ಕೆಲವು ಸೌಹಾರ್ದ ಸಹಕಾರಿಗಳು ಪರಿಣಾಮಕಾರಿಯಾಗಿ ನಡೆಸುತ್ತಿರುವುದು ಸಂತೋಷದ ವಿಷಯ. ಸದಸ್ಯರ ಜಾಗೃತಿಗೆ ಉತ್ತಮ ವೇದಿಕೆ. ಇವುಗಳನ್ನು ಸದುಪಯೋಗಪಡಿಸಿಕೊಳ್ಳುವ ಬುದ್ಧಿವಂತಿಕೆ ಆಡಳಿತ ಮಂಡಳಿಯವರದು. ಮೈಸೂರಿನ ಸಪ್ತಶ್ರೀ ಸೌಹಾರ್ದ ಸಹಕಾರಿ, ಹೊಸದಾಗಿ ಪ್ರಾರಂಭವಾಗಿರುವ ಸೂರ್ಯ ಸೌಹಾರ್ದ ಸಹಕಾರಿ, ಕೋಲಾರದ ದಿ ಪಾವಗಡ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಮುಂತಾದ ಸಹಕಾರಿ ತಮ್ಮ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ, ಶಾಖಾ ಸಮಿತಿ ಸದಸ್ಯರಿಗೆ ಸಹಕಾರಿಯ ಸದಸ್ಯರಿಗಾಗಿ ಅತ್ಯಂತ ಉತ್ತಮವಾಗಿ ಸದಸ್ಯರಿಗೆ ಪ್ರಯೋಜನವಾಗುವ ಹಾಗೆ ಅದರಿಂದ ಒಟ್ಟಾರೆ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಉಪಯೋಗವಾಗುವ ಹಾಗೆ ಶಿಕ್ಷಣ ಕಾರ್ಯಕ್ರಮಗಳು ನಡೆದಿವೆ. ಆದರೆ ಇದು ಸಾಲದು ಎಂಬುದು ಸಂಯುಕ್ತ ಸಹಕಾರಿಯ ನಿಲುವು.

ಪ್ರತಿಯೊಂದು ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗಳ ಚಟುವಟಿಕೆಗಳ ಜೊತೆಗೆ ಸದಸ್ಯರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ತಿಳಿಯಪಡಿಸುವ ಹಾಗೂ ಸದಸ್ಯರಿಗಾಗಿ ಸಹಕಾರಿಯ ಸೌಲಭ್ಯಗಳ ವಿವರಗಳನ್ನು ತಿಳಿಯಪಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಇಂದಿನ ಅವಶ್ಯಕತೆ.

ಜೊತೆಗೆ ಪ್ರತಿ ಮಾಹೆಯಲ್ಲಿ ಸಹಕಾರಿಯ ವ್ಯಾಪ್ತಿಯ ಒಂದು ವಿಭಾಗದಲ್ಲಿ ಸದಸ್ಯ ಸಂಪರ್ಕ ಕಾರ್ಯಕ್ರಮಗಳನ್ನು, ಸದಸ್ಯತ್ವ ನೋಂದಾವಣಿ ಅಭಿಯಾನವನ್ನು, ಸದಸ್ಯರಿಗೆ ನಿಡುವ ಸೌಲಭ್ಯಗಳ ಉದ್ಘಾಟನಾ ಕಾರ್ಯಕ್ರಮಗಳನ್ನು ಹಿರಿಯ ಸದಸ್ಯರಿಗೆ ಸನ್ಮಾನಿಸುವ ಕಾರ್ಯಕ್ರಮವನ್ನು, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಗಳನ್ನು ನೀಡುವ ಆಧುನಿಕತೆಯನ್ನು ಅಳವಡಿಸುವ, ಹೀಗೆ ಯಾವುದಾದರೊಂದು ಕಾರ್ಯಕ್ರಮದ ಮೂಲಕ ಸದಸ್ಯರಲ್ಲಿ ಜಾಗ್ರತಿ ಮೂಡಿಸುವ ಸದಸ್ಯರಿಗೆ ಸಹಕಾರಿ ತನ್ನದು ಎಂಬ ಭಾವನೆ ಮೂಡಿಸುವ ಕಾರ್ಯ ನಡೆಯಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ. ಪ್ರತಿಯೊಬ್ಬ ಸಹಕಾರಿಯಲ್ಲಿ ಈ ಕಾರ್ಯಕ್ರಮ ನಿರಂತರವಾಗಿ ಈ ಜಾಗೃತಿ ಕಾರ್ಯಕ್ರಮ ನಡೆಯಬೇಕಾಗಿದೆ.

ಸಹಕಾರಿಯ ಪ್ರತಿಯೊಬ್ಬ ಸದಸ್ಯ ಸೌಹಾರ್ದ ಸಹಕಾರಿ ಕ್ಷೇತ್ರದ ವಕ್ತಾರನಾಗಿ ಕಾರ್ಯನಿರ್ವಹಿಸಬೇಕಿದೆ. ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಸಕ್ರೀಯನಾಗಿ ಪಾಲ್ಗೊಳ್ಳಬೇಕಿದೆ. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರವನ್ನು ನಿರ್ವಹಿಸುವುದನ್ನು ಸಹಕಾರಿಗಳು ಆನಂದಿಸಬೇಕಿದೆ. ದೇಶದ ಮಹತ್ವದ ಯೋಜನೆಗಳನ್ನು ಜಾರಿಮಾಡಲು ಸಹಕಾರಿ ಕ್ಷೇತ್ರವೇ ಪ್ರಧಾನ ಸಾಧನವಾಗಿರಬೇಕು. ಹುಟ್ಟಿನಿಂದ ಅಂತ್ಯದವರೆಗೆ ಸಹಕಾರಿ ವ್ಯವಸ್ಥೆಯಲ್ಲಿಯೆ ಎಲ್ಲ ಚಟುವಟಿಕೆಗಳನ್ನು ನಿರ್ವಹಿಸಬೇಕು. ಅದಕ್ಕಾಗಿ ಸದಸ್ಯ ಜಾಗೃತಿ ಹಾಗೂ ತರಬೇತಿ. ■

# ಚೀನಾ ದೇಶದ ಅದ್ಭುತ ಸಾಧನೆ : ನೆನಪಿನಲ್ಲಿರಬೇಕಾದ ಪ್ರವಾಸ



ಒಂದು ಕಾಲದಲ್ಲಿ ಚೀನಾ ಹೆಸರು ತೆಗೆಯುತ್ತಲೆ ಎಲ್ಲರೂ ಅಂದು ಕೊಳ್ಳುತ್ತಿದ್ದುದು ಪ್ರಪಂಚದಲ್ಲಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ. ಗ್ರೇಟ್ ವಾಲ್ ಆಫ್ ಚೈನಾ. ಹರಿದು ತಿನ್ನುವ ಬಡತನ. ಯಾವುದಕ್ಕೂ ಸ್ವಾತಂತ್ರವಿಲ್ಲದ ಕಮ್ಯುನಿಸ್ಟ್ ಆಡಳಿತದ ದೇಶ.

ಆದರೆ ಇಂದು ಚೀನಾ ದೇಶದ ಚಿತ್ರಣವೇ ಬೇರೆ. ಪ್ರಪಂಚದ ಬಲಿಷ್ಠ ರಾಷ್ಟ್ರ. ಮುಂದುವರಿದ ರಾಷ್ಟ್ರಗಳಲ್ಲಿ ಮುಂದು. ಆಧುನಿಕತೆ, ತಾಂತ್ರಿಕತೆಗಳನ್ನು ಅಳವಡಿಸಿಕೊಂಡು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿದೆ ಅಲ್ಲಿನ ಸರಕಾರ. ಅದಕ್ಕೆ ದೇಶದ ಜನರ ಸಂಪೂರ್ಣ ಸಹಕಾರ.

50% ಕ್ಕಿಂತಲೂ ಹೆಚ್ಚು ಭೂಮಿ ವ್ಯವಸಾಯಕ್ಕೆ ಯೋಗ್ಯವಲ್ಲದಿದ್ದರೂ ಉತ್ತಮ ವ್ಯವಸಾಯ ಮಾಡಿ ಹೆಚ್ಚು ಫಸಲುಗಳನ್ನು ತೆಗೆಯುವ ಸಾಹಸಮಯ ಜೀವ ಇವರದು. ವ್ಯವಸಾಯದಲ್ಲಿ, ಹೈನುಗಾರಿಕೆಯಲ್ಲಿ, ವ್ಯವಸಾಯಕ್ಕೆ ಪೂರಕವಾಗುವ ಎಲ್ಲ ಕಸಬುಗಳಲ್ಲಿ, ಕೈಗಾರಿಕೆಯಲ್ಲಿ, ಮೀನುಗಾರಿಕೆಯಲ್ಲಿ, ಶಿಕ್ಷಣರಂಗದಲ್ಲಿ, ಆರೋಗ್ಯ ರಕ್ಷಣೆಯಲ್ಲಿ, ನಿರುದ್ಯೋಗ ನಿವಾರಣೆಯಲ್ಲಿ, ಸಾಮಾಜಿಕವಾಗಿ ಹೀಗೆ ಎಲ್ಲ ರಂಗದಲ್ಲೂ ಮುಂದಿದೆ, ಮಾದರಿ ಎನಿಸಿದೆ.

ಸಾಮಾಜಿಕ ಪಿಡುಗುಗಳಿಲ್ಲ. ಮೂಢತನಗಳಿಲ್ಲ. ಆಡಂಬರಗಳಿಲ್ಲ. ಜಾತೀಯತೆಯಿಲ್ಲ. ರಾಜಕೀಯ ದೊಂಬರಾಟವಿಲ್ಲ. ಹುಡುಗ ಹುಡುಗೀಯರ ಒಪ್ಪಿಗೆಯಿಂದ ಸರಳ ವಿವಾಹ ಪದ್ಧತಿಗಳು, ನಿರುದ್ಯೋಗವಿಲ್ಲ. ಕಸದಿಂದ ರಸ ತೆಗೆಯುವ ಪ್ರವೃತ್ತಿಯನ್ನು ರೂಢಿಸಿಕೊಂಡಿದ್ದಾರೆ. ಬಡವರಿಗಾಗಿ ಸರಕಾರದಿಂದಲೇ ವಸತಿ ಹಾಗೂ ಶಿಕ್ಷಣ, ಆರೋಗ್ಯ ವ್ಯವಸ್ಥೆಗಳು ಬಡತನವನ್ನು ಮೆಟ್ಟಿ ನಿಂತಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗುವುದಿಲ್ಲ. ಕಾಯಕವೇ ಕೈಲಾಸವೆಂಬ ಬಸವಣ್ಣನವರ ನುಡಿಯನ್ನು ಸತ್ಯವಾಗಿಸಿ ಕೊಂಡಿರುವ ದೇಶ ಚೀನಾ. ಅಲ್ಲಿನ 4,6 ಜೋಡಿಗಳ ಭವ್ಯ ರಸ್ತೆಗಳ ವ್ಯವಸ್ಥೆ, ಬೀಜಿಂಗ್‌ನಲ್ಲಿರುವ 6 ರಿಂಗ್ ರಸ್ತೆಗಳು ಸಾಂಘಿಯಾದಲ್ಲಿರುವ 12 ರಿಂಗ್ ರಸ್ತೆಗಳು, 600 ಮೀಟರ್ ಎತ್ತರದ ಟಿ.ವಿ.ಟವರ್, ಅತಿ ಎತ್ತರದ ಕನಿಷ್ಠ 50ಕ್ಕೂ ಹೆಚ್ಚು ಮಹಡಿಯುಳ್ಳ ಗಗನಚುಂಬಿ ಕಟ್ಟಡಗಳು ಅತ್ಯಂತ ವೇಗವಾಗಿ ಸಾಗುವ ಬುಲ್ಲೆಟ್ ಟ್ರೇನ್, ಮೆಟ್ರೊ ಟ್ರೈನ್‌ಗಳು, ಉದ್ದಕ್ಕೂ ಎಲ್ಲಿ ನೋಡಿದರಲ್ಲಿ ಹಸಿರು, ಸ್ವಾಭಾವಿಕ ಸಂಪನ್ಮೂಲಗಳ ಸದ್ಬಳಕೆ, ನದಿಗಳ ನೀರಿನ ಉತ್ತಮ ಬಳಕೆ ನೋಡುವವರ ಕಣ್ಣಿಗೆ ಹಬ್ಬ, ಆಶ್ಚರ್ಯ ಹಾಗೂ ಅದ್ಭುತಗಳಾಗಿ ಕಾಣುತ್ತವೆ.

ದೇಶದ ಯಾವ ವ್ಯಕ್ತಿಗೂ ಸ್ವಂತ ಆಸ್ತಿ ಹೊಂದುವ ಹಕ್ಕು ಇರುವುದಿಲ್ಲ. ಎಲ್ಲವೂ ಲಭ್ಯ ಎಲ್ಲರಿಗೂ ಅವರವರ ಕೆಲಸದ ಸಾಮರ್ಥ್ಯದ ಮೇಲೆ ಅವಲಂಬನೆ. 2221 ಕಿ.ಮೀ. ಪರ್ಲನದಿ 6 ಸಂಸ್ಥಾನಗಳಲ್ಲಿ ಹರಿಯುತ್ತದೆ. ಯಾಂಗಿ ನದಿ 7,600 ಕಿ.ಮೀ. 2 ಸಂಸ್ಥಾನಗಳಲ್ಲಿ ಹರಿದಿದೆ. ಹಳದಿ ನದಿ 4,300 ಕಿ.ಮೀ. 10 ಸಂಸ್ಥಾನಗಳಲ್ಲಿ ಹರಿದಿದೆ. ಪ್ರವಾಸೋದ್ಯಮವನ್ನು ಹೆಚ್ಚು ಬಳಸಿದ್ದಾರೆ. ಒಂದು ಘಂಟೆಯೊಳಗೆ ವೀಸಾ ಸಿಗುವ ವ್ಯವಸ್ಥೆ ಇಲ್ಲಿರುವುದು ವಿಶೇಷ. ಅತ್ಯುತ್ತಮ ಗ್ರಾಹಕ ಸೇವೆಗಳು ಇಲ್ಲಿ ಲಭ್ಯವಾಗುತ್ತವೆ. ಅದಕ್ಕೆ ಹೊಂದಿಕೊಂಡಿರುವ ಅದೇ ದೇಶದ ಆಡಳಿತಕ್ಕೊಳಪಟ್ಟಿರುವ ದೇಶ ಮಖಾವ್.

ವೈಭವಪೂರಿತ ಜೀವನ ಬಯಸುವವರಿಗೆ ಅದನ್ನೆ ನಡೆಸುವವರಿಗೆ ಸರಿ. ವಿಶ್ವದ ಅತ್ಯಂತ ವೈಭವೋಪೇತ ಜೀವನ ಇಲ್ಲಿ ಸಾಧ್ಯ. ಇಲ್ಲಿ 5 "ಸಿ"ಗಳು ಇದ್ದರೆ ಮಾತ್ರ ಇದ್ದವರಿಗೆ ಇದು ಸಾಧ್ಯವೆಂದು ಹೇಳುತ್ತಾರೆ. ಕ್ಯಾಶ್– ಕಾರ್ – ಕ್ರೆಡಿಟ್ ಕಾರ್ಡ – ಕ್ರುಸ ಮತ್ತು ಕ್ಯಾಸಿನೊ.

# ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿಯ 12ನೇ ವಾರ್ಷಿಕ ಸಾಮಾನ್ಯ ಸಭೆ



ದಿನಾಂಕ : 24/08/2014ರಂದು ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿಯ 12ನೇ ವಾರ್ಷಿಕ ಸಾಮಾನ್ಯ ಸಭೆಯು ಹಾನಗಲ್ಲಿನ ಜನತಾ ಶಿಕ್ಷಣ ಸೌಹಾರ್ದ ಸಂಸ್ಥೆಯ ಶ್ರೀ ಕುಮಾರೇಶ್ವ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಭಾ ಭವನದಲ್ಲಿ ಸಂಜೆ 4.00 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಎಂ.ಬಿ.ಕಲಾಲ್ ಇವರ ಅಧ್ಯಕ್ಷತೆಯಲ್ಲಿ ಜರುಗಿರುತ್ತದೆ. ಮುಖ್ಯ ಅತಿಥಿಗಳಾಗಿ ಶ್ರೀ ಸಿ.ಎಂ.ಉದಾಸಿ, ಮಾಜಿ ಲೋಕೋಪಯೋಗಿ ಸಚಿವರು ಶ್ರೀ ಕಲ್ಯಾಣಕುಮಾರ ಶೆಟ್ಟರ ಅಧ್ಯಕ್ಷರು, ಹಾವೇರಿ ಜಿಲ್ಲಾ ಸಹಕಾರಿ ಯೂನಿಯನ್ ಹಾಗೂ ಶ್ರೀ ಎ.ಎಸ್.ಬಳ್ಳಾರಿ ಅಧ್ಯಕ್ಷರು, ಜನತಾ ಶಿಕ್ಷಣ ಸೌಹಾರ್ದ ಸಂಸ್ಥೆ ಹಾನಗಲ್ ಇವರುಗಳನ್ನೊಳಗೊಂಡ ಮಹಾಸಭೆಯು ಜರುಗಿತು. ಸಂಸ್ಥೆಯು 2013–14 ಸಾಲಿನಲ್ಲಿ ರೂ, 24,50,55,799/–ಗಳ ಆರ್ಥಿಕ ವಹಿವಾಟು ಕೈಕೊಂಡು ರೂ, 21,22,365/–ಗಳ ನಿವ್ವಳ ಲಾಭ ಗಳಿಸಿದ್ದು ಶೇ.12%ರಂತೆ ಡಿವ್ಹಿಡೆಂಡ್ ವಿತರಣೆ ಮಾಡಲು ನಿರ್ಣಯಿಸಲಾಯಿತು.

ಇದೇ ವೇಳೆ ಹಾವೇರಿ ಜಿಲ್ಲಾ ಸಹಕಾರಿ ಯೂನಿಯನ್‌ಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಕಲ್ಯಾಣಕುಮಾರ ಶೆಟ್ಟರ ಇವರಿಗೆ ಸಂಸ್ಥೆ ವತಿಯಿಂದ ಶ್ರೀ ಸಿ.ಎಂ. ಉದಾಸಿ ಮಾಜಿ ಲೋಕೋಪಯೋಗಿ ಸಚಿವರು ಶಾಲು ಹೊದಿಸಿ ಸನ್ಮಾನಿಸಿದರು.

# ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., : ಸರ್ವಸದಸ್ಯರ ಸಾಮಾನ್ಯ ಸಭೆ



ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಯಲಹಂಕ ಉಪನಗರ ಇದರ 2013–14ನೇ ಸಾಲಿನ 5ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ದಿನಾಂಕ 10/08/2014ರಂದು ಭಾನುವಾರ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಸಭಾಂಗಣ, ಯಲಹಂಕ ಉಪನಗರ ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ಮುನಿರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಈ ಮಹತ್ವದ ಸಭೆಗೆ 778 ಸದಸ್ಯರು ಪಾಲ್ಗೊಂಡು, ವಿವಿಧ ವಿಷಯಗಳನ್ನು ಮಂಡಿಸಿ, ಚರ್ಚಿಸಿದ ನಂತರ ಸದಸ್ಯರಿಂದ ಸರ್ವಾನುಮತದ ತೀರ್ಮಾನಗಳನ್ನು ತೆಗೆದುಕೊಂಡು ದಾಖಲು ಮಾಡಲಾಯಿತು. ಸಹಕಾರಿಯು 2013–14ನೇ ಸಾಲಿನಲ್ಲಿ ರೂ.1,32,26,862/–ಗಳ ನಿವ್ವಳ್ಳ ಲಾಭಾಂಶವನ್ನು ದಾಖಲಿಸಿದ್ದು, ಇದರಲ್ಲಿ ಶೇ.14%ರಂತೆ ಡಿವಿಡೆಂಡ್‌ನ್ನು ವಿತರಿಸಲು ತೀರ್ಮಾನಿಸಲಾಯಿತು ಮತ್ತು ಹೆಚ್ಚಿನ ಸದಸ್ಯರು ಭಾಗವಹಿಸಿ ತಮ್ಮ ಅಮೂಲ್ಯವಾದ ಸಲಹೆ, ಸೂಚನೆಗಳನ್ನು ನೀಡುವುದರ ಮೂಲಕ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಯಶಸ್ವಿಗೊಳಿಸಿದರು.

## ಶ್ರೀ ವಾಜುಭಾಯಿ ರುಡಾಭಾಯಿ ವಾಲಾ : ಕರ್ನಾಟಕದ 16ನೇ ರಾಜ್ಯಪಾಲರಾಗಿ ಪ್ರಮಾಣ ವಚನ



ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಆಪ್ತರು, ಆರ್.ಎಸ್.ಎಸ್. ಹಿರಿಯ ಕಾರ್ಯಕರ್ತರಾದ ಗುಜರಾತಿನ ಧೋಕ್ಲಾದವರಾದ 76 ವರ್ಷ ವಯಸ್ಸಿನ ಶ್ರೀ ವಾಜುಭಾಯಿ ವಾಲಾ ಈಗ ಕರ್ನಾಟಕದ ನೂತನ ರಾಜ್ಯಪಾಲರು.

ಶ್ರೀಯುತರು ಬಿಎಸ್‌ಸಿ, ಎಲ್‌ಎಲ್‌ಬಿ ಪದವೀಧರರು. ಸಾಮಾಜಿಕ ಕಾರ್ಯಕರ್ತರು. 1983ರಲ್ಲಿ ರಾಜಕೋಟದ ಮೇಯರ್ ಆಗಿ ಆಯ್ಕೆಯಾಗುವ ಮೂಲಕ ಸಾರ್ವಜನಿಕ ಜೀವನಕ್ಕೆ ಬಂದವರು. 1985ರಲ್ಲಿ ಪ್ರಥಮ ಬಾರಿಗೆ ರಾಜಕೋಟ್‌ನಿಂದ ಗುಜರಾತ್ ವಿಧಾನ ಸಭೆಗೆ ಆಯ್ಕೆಯಾಗಿ 1990ರಲ್ಲಿ ಸಚಿವರಾದರು. ಗುಜರಾತ್ ವಿಧಾನ ಮಂಡಳದಲ್ಲಿ ಹಣಕಾಸು ಸಚಿವರಾಗಿ 18 ಬಾರಿ ಬಡ್ಜೆಟ್ ಮಂಡನೆ ಮಾಡಿದ ಗೌರವ ಶ್ರೀಯುತರಿಗೆ ಸಲ್ಲುತ್ತದೆ. ಕಳೆದ ವರ್ಷ ಗುಜರಾತ್ ವಿಧಾನ ಸಭೆಯ ಸಭಾಪತಿಯಾಗಿ ಆಯ್ಕೆಯಾದ ಶ್ರೀ ವಾಜುಭಾಯಿ ವಾಲಾ, ಈ ಹಿಂದೆ ರಾಜಕೋಟ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಗುಜರಾತಿನಲ್ಲಿ ಸಹಕಾರ ಬ್ಯಾಂಕಿಂಗ್ ವ್ಯವಸ್ಥೆ ಬೆಳೆಯಲು ಮಹತ್ವದ ಕಾಣಿಕೆ ನೀಡಿದ್ದಾರೆ.

## ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿಯ ಮೊದಲ ಶಾಖೆಯ ಉದ್ಘಾಟನೆ

ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿಯ ಮೊದಲ ಶಾಖೆಯು ಗುಲಬರ್ಗಾ ನಗರದ ನೆಹರು ಗಂಜ್ ಪ್ರದೇಶದಲ್ಲಿ ದಿನಾಂಕ : 21–08–2014 ರಂದು ಉದ್ಘಾಟನೆಗೊಂಡಿತು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಗುರುನಾಥ ಜ್ಯಾಂತಿಕರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು, ಅವರು ಹೈದ್ರಾಬಾದ್ ಕರ್ನಾಟಕ ವಿಭಾಗದಲ್ಲಿ ಮಾದರಿ ಸಹಕಾರಿಯಾಗಿ ಬೆಳೆದ ಸಿದ್ಧಿವಿನಾಯಕ ಮುಂಬರುವ ದಿನಗಳಲ್ಲಿ ಇನ್ನಷ್ಟು ಶಾಖೆಗಳನ್ನು ಪ್ರಾರಂಭಿಸುವ ಮೂಲಕ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲಿ, ಸಾರ್ವಜನಿಕ ಬದುಕಿನ ಜೀವಾಳವಾಗಲಿ ಎಂದು ಆಶಿಸಿದರು.

ಶಾಖೆ ಉದ್ಘಾಟಿಸಿದ ಗುಲಬರ್ಗಾ ಹಾಗೂ ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ, ಶ್ರೀ ಸೋಮಶೇಖರ ಗೋನಾಯಕ, ಮೊದಲಿಗಿಂತಲೂ ಇಂದು ಜನರು ಹೆಚ್ಚಾಗಿ ಸಹಕಾರಿ ಬ್ಯಾಂಕುಗಳಲ್ಲಿ ವ್ಯವಹಾರ ಮಾಡುತ್ತಿದ್ದಾರೆ ಎಂದರು.

ಸಿದ್ಧಿವಿನಾಯಕ ಸೌಹಾರ್ದ ಸಹಕಾರಿ ಸಂಸ್ಥೆಯಲ್ಲಿ ವ್ಯವಹಾರ ಮಾಡಿ ತಮ್ಮ ಭವಿಷ್ಯ ರೂಪಿಸಿಕೊಂಡಿದ್ದಾರೆ. ಸಿದ್ಧಿವಿನಾಯಕ ಈ ದಿಸೆಯಲ್ಲಿ ಈಗಾಗಲೇ ಕಾರ್ಯಪ್ರವೃತ್ತವಾಗಿದೆ.

ಸದಸ್ಯರ ಹಾಗೂ ಗ್ರಾಹಕರ ಜೊತೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಂಡಿದೆ, ಎಂದು ಹೇಳಿದರು. ನೆಹರು ಗಂಜ ಶಾಖೆಯ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕೆಂದು ಹೇಳಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ



ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ ಹಾಗೂ ಗುಲಬರ್ಗಾ ಜಿಲ್ಲಾ ಸಹಕಾರ ಸಂಘಗಳ ಇಲಾಖೆಯ ಉಪ ನಿಬಂಧಕರಾದ ಶ್ರೀ ವಿಶ್ವನಾಥ ಮಲಕೂಡ, ಸಿದ್ಧಿವಿನಾಯಕ ಸಹಕಾರಿಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಾ ಸಂಸ್ಥೆ ಇನ್ನಷ್ಟು ಅಭಿವೃದ್ಧಿ ಹೊಂದಲಿ ಎಂದು ಹೇಳಿದರು. ನೆಹರು ಗಂಜ ಪ್ರದೇಶದ ವ್ಯಾಪರಸ್ಥರಿಗೆ, ರೈತರಿಗೆ, ಕೂಲಿ ಕಾರ್ಮಿಕರಿಗೆ ಈ ಶಾಖೆ ವಿಶಿಷ್ಟ ಸೇವೆಯನ್ನು ನೀಡಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಿದ್ಧಿವಿನಾಯಕ ಸೌಹಾರ್ದ ಸಹಕಾರಿಯು ತನ್ನ 15ಕ್ಕೂ ಹೆಚ್ಚು ಉತ್ತಮ ಗ್ರಾಹಕರನ್ನು ಸನ್ಮಾನಿಸಿತು. ಕಾರ್ಯಕ್ರಮದ ಪ್ರಾರಂಭದಲ್ಲಿ ಸಿದ್ಧಿನಾಯಕ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂಜೀವ ಮಹಾಜನ ಅವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಕೊನೆಯಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಸಿದ್ರಾಮಪ್ಪಾ ಪಾಟೀಲ ವಂದಿಸಿದರು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆಯವರು ಧ್ವಜಾರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿವರ್ಗದವರು ಭಾಗವಹಿಸಿದ್ದರು.

## ಬೆಳಗಾವಿ ವಿಭಾಗೀಯ ಕಚೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ವಿಭಾಗೀಯ ಕಛೇರಿಯಲ್ಲಿ 15ನೇ ಆಗಸ್ಟ್ 2014ರಂದು ಧ್ವಜರೋಹಣ ಹಾಗೂ ಧ್ವಜವಂದನೆ ಕಾರ್ಯಕ್ರಮ ಜರುಗಿತು. ಸದರಿ ಕಾರ್ಯಕ್ರಮಕ್ಕೆ ಧ್ವಜರೋಹಣ ಮಾಡಲು ಬೆಳಗಾವಿ ಜಿಲ್ಲೆಯ ಸಹಕಾರಿ ಸಂಘಗಳ ಲೆಕ್ಕಪರಿಶೋಧನಾ ವಿಭಾಗದ ಉಪನಿರ್ದೇಶಕರಾದ ಶ್ರೀ ಬಿ.ಸುರೇಶರಾವ್ ಅತಿಥಿಗಳಾಗಿ ಆಗಮಿಸಿದ್ದರು ಅವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲ ಗಣ್ಯಮಾನ್ಯರನ್ನು ಪ್ರಾರಂಭದಲ್ಲಿ ಸ್ವಾಗತಿಸಲಾಯಿತು.

ಈ ಸಂದರ್ಭದಲ್ಲಿ ಬೆಳಗಾವಿ ರಿಜನಲ್ ಮ್ಯಾನೇಜರ್, ಸಿಬ್ಬಂದಿ ವರ್ಗ, ಅರಿಹಂತ ಸೌಹಾರ್ದ ಸಹಕಾರಿಯ ಸಿಬ್ಬಂದಿ ವರ್ಗ ಹಾಗೂ ನಿರ್ದೇಶಕ ಮಂಡಳಿಯ ಸದಸ್ಯರು, ಹುಲಿಯಗೋಳ ಕುಟುಂಬದ ಎಲ್ಲ ಹಿರಿಯರು ಹಾಗೂ ಕಿರಿಯರು, ಲೆಕ್ಕಪರಿಶೋಧಕರಾದ ಶ್ರೀ ಶಾಂತಿನಾಥ ನಾಯ್ಕ ಹಾಗೂ ಬೇರೆ ಬೇರೆ ಸೌಹಾರ್ದ ಸಹಕಾರಿಗಳ ವ್ಯವಸ್ಥಾಪಕರುಗಳು ಸದರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



**ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ವಿದೇಶ ಅಧ್ಯಯನ ಪ್ರವಾಸ ಸಂದರ್ಭದಲ್ಲಿ ಸ್ವಾತಂತ್ರ್ಯ ದಿನಾಚರಣೆ**

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಿಂದ 68ನೇ ಸ್ವಾತಂತ್ರ್ಯೋತ್ಸವ



ಶ್ರೀ ಹಳದರಂಗ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹಳ್ಳೂರ ಸ್ವಾತಂತ್ರ್ಯೋತ್ಸವವನ್ನು ಸರ್ಕಾರಿ ಪ್ರೌಢಶಾಲೆ ಮಕ್ಕಳು ಹಾಗೂ ಸಹಕಾರಿಯ ಆಡಳಿತ ಮಂಡಳಿಯವರು ಆಚರಿಸಿದರು.



ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಮೈಸೂರು. ಇಲ್ಲಿ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಸಹಕಾರಿಗಳಿಂದ ಧ್ವಜ ವಂದನೆ.



ನಂದನ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಇದರ ವತಿಯಿಂದ ದಿನಾಚರಣೆಯನ್ನು ಆಚರಿಸಲಾಯಿತು. ಸಮಾಜ ಸೇವಕಿ ಶ್ರೀಮತಿ ಪ್ರಮೀಳ ರಾವ್ ಧ್ವಜಾರೋಹಣ ನೆರವೇರಿಸಿ ಶುಭ ಹಾರೈಸಿದರು, ನಂದನ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತದ ಉಪಾಧ್ಯಕ್ಷ ಶ್ರೀ ದಾಮೋದರ ಪಾಟಾಳಿ ಸ್ವಾಗತಿಸಿ, ಕಟ್ಟಡ ಮಾಲೀಕ ಮತ್ತು ಉದ್ಯಮಿ ಶ್ರೀ ಶಿವಪ್ರಸಾದ್ ಶೆಟ್ಟಿ ವಂದಿಸಿದರು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಎಲ್ಲಾ ನಿರ್ದೇಶಕರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



ಗೋಕಾಕ : ಕಲ್ಲೋಳಿಯ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯ 2013–14ನೇ ಸಾಲಿನಲ್ಲಿ 10.95 ಲಕ್ಷ ಲಾಭಗಳಿಸಿದೆ ಎಂದು ಸಹಕಾರಿಯ ಅಧ್ಯಕ್ಷ ಈರಣ್ಣ ಕಡಾಡಿ ಹೇಳಿದರು. ಕಲ್ಲೋಳಿ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ರೂ.10.95 ಲಕ್ಷ ಲಾಭ ಪಡೆದಿದೆ.

# ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ ನಾಲ್ಕನೇ ಸರ್ವಸದಸ್ಯರ ಸಭೆಯ ಮತ್ತು ಸಾಲುಮರದ ತಿಮ್ಮಕ್ಕನವರ ಸನ್ಮಾನ ಸಮಾರಂಭ



ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ (ನಿ) ನಾಲ್ಕನೇ ಸರ್ವಸದಸ್ಯರ ಸಭೆಯು ಹುಣಸಮಾರನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆಡಿಟೋರಿಯಂನಲ್ಲಿ ನಡೆಯಿತು. ಈ ಕಾರ್ಯಕ್ರಮದ ಪ್ರಯುಕ್ತ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಪರಿಸರ ಪ್ರೇಮಿ ಶತಾಯುಷಿ ಸಾಲುಮರ ತಿಮ್ಮಕ್ಕನವರನ್ನು ಸನ್ಮಾನಿಸಲಾಯಿತು. ಸಹಕಾರಿಯು ಮತ್ತು ಸಹಕಾರಿಯ ಸದಸ್ಯರು ತಿಮ್ಮಕ್ಕನವರಿಗೆ ಧನಸಹಾಯ ಮಾಡುವ ಮೂಲಕ ತಮ್ಮ ಪರಿಸರ ಕಾಳಜಿಯನ್ನು ವ್ಯಕ್ತಪಡಿಸಿದರು. ತಿಮ್ಮಕ್ಕರವರಿಗೆ ಸಹಕಾರಿ ವತಿಯಿಂದ ಸನ್ಮಾನಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ (ನಿ) ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ ಮಾತನಾಡುತ್ತಾ, ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯು ಸಾಲುಮರ ತಿಮ್ಮಕ್ಕರವರನ್ನು ಸನ್ಮಾನಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ. ಇದು ಸಹಕಾರಿಯ ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಸಹಕಾರಿಯು ಪ್ರಾರಂಭಿಸಿರುವ ಯಶಸ್ವಿನಿ ವಿಮಾ ಯೋಜನೆ ಮತ್ತು ಇನ್ನಿತರ ಠೇವಣಿ ಯೋಜನೆಗಳಲ್ಲಿ ಎಲ್ಲಾ ಸದಸ್ಯರು ಭಾಗವಹಿಸಿ ಸಹಕಾರಿಯ ಮೂಲಬಂಡವಾಳವನ್ನು ಐದು ಕೋಟಿಗೆ ಹೆಚ್ಚಿಸಬೇಕೆಂದು ಈ ಸಂದರ್ಭದಲ್ಲಿ ಕರೆ ನೀಡಿದರು. ಹುಣಸಮಾರನಹಳ್ಳಿ ಗ್ರಾಮಪಂಚಾಯ್ತಿ ಅಧ್ಯಕ್ಷ ಶ್ರೀ ಎ.ಕೆ.ಜಿಲಾನಿ ಮತ್ತು ಸಾಮಾಜಿಕ ಕಾರ್ಯಕರ್ತರು, ಸಂಸ್ಕೃತ ವಿದ್ವಾಂಸರಾದ ಶ್ರೀ ಬಿ.ಬಸವರಾಜಪ್ಪರವರು ಸಾಲುಮರ ತಿಮ್ಮಕ್ಕನವರ ಪರಿಸರ ಪ್ರಜ್ಞೆಯನ್ನು ಪ್ರಶಂಶಿಸಿದರು. ಸನ್ಮಾನ ಸ್ವೀಕರಿಸಿ ಸಾಲುಮರ ತಿಮ್ಮಕ್ಕ ಮಾತನಾಡುತ್ತ, ತಮ್ಮ ಹುಟ್ಟೂರಿನಲ್ಲಿ ಹೆರಿಗೆ ಆಸ್ಪತ್ರೆ ನಿರ್ಮಾಣದ ಕನಸು ಇಂದಿಗೂ ನನಸಾಗಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು. ಕಾರ್ಯಕ್ರಮದ ಪ್ರಯುಕ್ತ ಹಮ್ಮಿಕೊಂಡಿದ್ದ ಪ್ರಬಂಧ ಸ್ಪರ್ಧೆಗಳ ವಿಜೇತರಿಗೆ ರಾಷ್ಟ್ರಪ್ರಶಸ್ತಿ ಪುರಸ್ಕೃತರಾದ ಮುಖ್ಯ ಶಿಕ್ಷಕರಾದ ಶ್ರೀ ಭದ್ರಯ್ಯ ಹಾಗೂ ಅಪೆಕ್ಸ್ ಬ್ಯಾಂಕ್ ಯಲಹಂಕ ಶಾಖೆಯ ಪ್ರಬಂಧಕರಾದ ಶ್ರೀ ಬಿ.ರಾಮಣ್ಣ ಪ್ರಶಸ್ತಿಗಳನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ ಖ್ಯಾತ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಶ್ರೀಕಂಠಮೂರ್ತಿ, ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಆರ್.ಬೈರೇಗೌಡ, ಉಪಾಧ್ಯಕ್ಷ ಶ್ರೀ ವೀರೇಶ್, ಗೌರವ ಕಾರ್ಯದರ್ಶಿ ಶ್ರೀ ಬಿ.ಪುಟ್ಟಶಾಮಪ್ಪ ಮತ್ತಿತರರು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ ಶ್ರೀ ಡಿ.ಎಸ್.ವೆಂಕಟಾಚಲಪತಿ ನಡೆಸಿಕೊಟ್ಟರು.

## ಡಾ॥ ಯು.ಆರ್. ಅನಂತಮೂರ್ತಿ ಅವರಿಗೆ ಶ್ರದ್ಧಾಂಜಲಿ



ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಸಂಯುಕ್ತ ಸಹಕಾರಿಯ ವಿಭಾಗಿಯ ಕಛೇರಿಯಲ್ಲಿ ನಮ್ಮನ್ನು ಅಗಲಿದ ಜ್ಞಾನಪೀಠ ಹಾಗೂ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಕನ್ನಡದ ಹಿರಿಯ ಸಾಹಿತಿ ಡಾ॥ ಯು.ಆರ್. ಅನಂತಮೂರ್ತಿಯವರಿಗೆ ಒಂದು ನಿಮಿಷ ಮೌನಾಚರಣೆ ಮಾಡುವುದರ ಮುಖಾಂತರ ಶ್ರದ್ಧಾಂಜಲಿ ಅರ್ಪಿಸಲಾಯಿತು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

'ನಿರ್ಮಾಣ ಭವನ', ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010
www.souharda.coop, Ph: 080-23378375-80,E-mail: souharda@souharda.coop

**ಈ ಕೆಳಗಿನ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

| ಕ್ರ.ಸಂ. | ಹುದ್ದೆಗಳ ಹೆಸರು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ |
|---|---|---|---|
| 1 | ಕಿರಿಯ ಅಧಿಕಾರಿಗಳು<br>ಕಾನೂನು ವಿಭಾಗ–2<br>ಆಡಳಿತ ವಿಭಾಗ–3 | 5 | ➢ ಅಂಗೀಕೃತ ವಿಶ್ವವಿದ್ಯಾಲಯದಿಂದ ಬಿ.ಎ./ಬಿ.ಎಸ್‌ಸಿ./ ಬಿ.ಕಾಂ/ಬಿ.ಬಿ.ಎಂ ಪದವಿ ಅಥವಾ ಸಹಕಾರ ವಿಷಯದಲ್ಲಿ ಪದವಿ ಪಡೆದಿರಬೇಕು. ಕಾನೂನು ವಿಭಾಗದ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದಿರುವವರಿಗೆ ಆದ್ಯತೆ ನೀಡಲಾಗುವುದು. ಹಾಗೂ ಆಡಳಿತ ವಿಭಾಗದ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯದಿಂದ ಎಂ.ಎಸ್.ಡಬ್ಲ್ಯು ಪದವಿ ಪಡೆದಿರುವವರಿಗೆ ಆದ್ಯತೆ ನೀಡಲಾಗುವುದು.<br>➢ ಕಂಪ್ಯೂಟರ್ ಪರಿಣಿತಿ ಕಡ್ಡಾಯ<br>➢ ಬ್ಯಾಂಕಿಂಗ್ ಅಥವಾ ಸಹಕಾರ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಿದ ಅನುಭವ ಹೊಂದಿದವರಿಗೆ ಆದ್ಯತೆ. |
| 2 | ಸೌಹಾರ್ದ ಅಭಿವೃದ್ಧಿ ಅಧಿಕಾರಿ<br>(ಕಿರಿಯ ಅಧಿಕಾರಿ ಶ್ರೇಣಿ) | 9 | |
| 3 | ಡಿಸೈನರ್<br>(ಕಿರಿಯ ಅಧಿಕಾರಿ ಶ್ರೇಣಿ) | 1 | ➢ ಅಂಗೀಕೃತ ವಿಶ್ವವಿದ್ಯಾಲಯದಿಂದ ಬಿ.ಎ./ಬಿ.ಎಸ್‌ಸಿ./ ಬಿ.ಕಾಂ/ಬಿ.ಬಿ.ಎಂ ಪದವಿ ಅಥವಾ ಸಹಕಾರ ವಿಷಯದಲ್ಲಿ ಪದವಿ ಪಡೆದಿರಬೇಕು.<br>➢ ಕಂಪ್ಯೂಟರ್ ಪರಿಣಿತಿ ಕಡ್ಡಾಯ.<br>➢ ಮುದ್ರಣಕ್ಕೆ ಸಂಬಂಧಿಸಿದಂತೆ ಡಿಸೈನಿಂಗ್‌ನಲ್ಲಿ ತರಬೇತಿ ಹೊಂದಿರಬೇಕು. ಮತ್ತು ಅನುಭವ / ಪರಿಣಿತಿ ಅಗತ್ಯ. |
| 4 | ಶೀಘ್ರಲಿಪಿಕಾರ(ಸ್ಟೆನೋಗ್ರಾಫರ್)<br>(ಸಹಾಯಕ ಶ್ರೇಣಿ) | 1 | ➢ ಅಂಗೀಕೃತ ವಿಶ್ವವಿದ್ಯಾಲಯದಿಂದ ಬಿ.ಎ./ಬಿ.ಎಸ್‌ಸಿ./ ಬಿ.ಕಾಂ/ಬಿ.ಬಿ.ಎಂ ಪದವಿ ಅಥವಾ ಸಹಕಾರ ವಿಷಯದಲ್ಲಿ ಪದವಿ ಪಡೆದಿರಬೇಕು.<br>➢ ಕಂಪ್ಯೂಟರ್ ಪರಿಣಿತಿ ಕಡ್ಡಾಯ.<br>➢ ಶೀಘ್ರಲಿಪಿಯನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಪ್ರೌಢದರ್ಜೆ(Senior) ಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಬೆರಳಚ್ಚಿನಲ್ಲಿ ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಪ್ರೌಢದರ್ಜೆ(Senior) ಯಲ್ಲಿ ತೇರ್ಗಡೆಯಾಗಿರಬೇಕು ಸಂಬಂಧಿಸಿದ ಅಂಗೀಕೃತ ಪ್ರಾಧಿಕಾರದಿಂದ ಪ್ರಮಾಣಪತ್ರ ಪಡೆದಿರಬೇಕು. |
| 5 | ಕಿರಿಯ ಸಹಾಯಕ<br>ಕಾನೂನು ವಿಭಾಗ–1<br>ಹಣಕಾಸು ವಿಭಾಗ–2<br>ಆಡಳಿತ ವಿಭಾಗ–5 | 8 | ➢ ಅಂಗೀಕೃತ ವಿಶ್ವವಿದ್ಯಾಲಯದಿಂದ ಬಿ.ಎ./ಬಿ.ಎಸ್‌ಸಿ. /ಬಿ.ಬಿ.ಎಂ ಪದವಿ ಅಥವಾ ಸಹಕಾರ ವಿಷಯದಲ್ಲಿ ಪದವಿ ಪಡೆದಿರಬೇಕು. ಕಾನೂನು ವಿಭಾಗದ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು. ಹಣಕಾಸು ವಿಭಾಗದ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯದಿಂದ ವಾಣಿಜ್ಯ ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು. ಹಾಗೂ ಆಡಳಿತ ವಿಭಾಗದ ಹುದ್ದೆಗೆ ಬಿ.ಎಸ್.ಡಬ್ಲ್ಯು ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು.<br>➢ ಕಂಪ್ಯೂಟರ್ ಪರಿಣಿತಿ ಕಡ್ಡಾಯ. |
| 6 | ವಾಹನ ಚಾಲಕ | 1 | ➢ ಏಳನೇ ತರಗತಿ ಉತ್ತೀರ್ಣರಾಗಿರತಕ್ಕದ್ದು. ಕನ್ನಡ ಓದಲು ಮತ್ತು ಬರೆಯಲು ಬರತಕ್ಕದ್ದು.<br>➢ ಮೋಟಾರ್ ವಾಹನ ಚಾಲನಾ ಪರವಾನಿಗೆ ಪಡೆದಿರತಕ್ಕದ್ದು.<br>➢ ಲಘುವಾಹನ ಚಾಲಕರಾಗಿ ಕನಿಷ್ಠ ಮೂರು ವರ್ಷ ಅನುಭವ ಹೊಂದಿರತಕ್ಕದ್ದು. |
| 7 | ಉಪ ಸಿಬ್ಬಂದಿ | 2 | ➢ ಅಂಗೀಕೃತ ಪ್ರೌಢಶಾಲೆಯಿಂದ ಕರ್ನಾಟಕ ಪ್ರೌಢಶಿಕ್ಷಣ ಪರಿಕ್ಷಾ ಮಂಡಲಿ ನಡೆಸುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.<br>➢ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. |

- ಒಟ್ಟು ಹುದ್ದೆಗಳ ಸಂಖ್ಯೆ 27.
- ಅರ್ಜಿ ಸಲ್ಲಿಸಲು ಅಂತಿಮ ದಿನಾಂಕದಂತೆ ಕನಿಷ್ಠ ವಯೋಮಿತಿ 18 ವರ್ಷಗಳು. ಕ್ರಮ ಸಂಖ್ಯೆ 1 ಮತ್ತು 2 ರ ಹುದ್ದೆಗಳಿಗೆ ಗರಿಷ್ಠ ವಯೋಮಿತಿ 35 ವರ್ಷಗಳು ಮತ್ತು ಉಳಿದ ಹುದ್ದೆಗಳಿಗೆ ಗರಿಷ್ಠ ವಯೋಮಿತಿ 30 ವರ್ಷಗಳು.
- ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ 10 ಅಕ್ಟೋಬರ್ 2014.

**ಅರ್ಜಿ ಸಲ್ಲಿಸುವ ವಿಧಾನ:**

1. ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಗಳನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೆಬ್‌ಸೈಟ್(www.souharda.coop)ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಛೇರಿಗೆ ಸಲ್ಲಿಸತಕ್ಕದ್ದು. ಮತ್ತು soft copy ಅನ್ನು ಇಮೇಲ್(recruitment@souharda.coop) ಮೂಲಕ ಸಹ ಸಲ್ಲಿಸತಕ್ಕದ್ದು.
2. ಮುದ್ರಿತ ಅರ್ಜಿಯ ಜೊತೆಗೆ ಕಿರಿಯ ಅಧಿಕಾರಿ/ಅಭಿವೃದ್ಧಿ ಅಧಿಕಾರಿ/ಡಿಸೈನರ್ ಹುದ್ದೆಗಳಿಗೆ ರೂ.500/–, ಸ್ಟೆನೋಗ್ರಾಫರ್/ಕಿರಿಯ ಸಹಾಯಕ ಹುದ್ದೆಗಳಿಗೆ ರೂ.300/– ಹಾಗೂ ವಾಹನ ಚಾಲಕ/ಉಪಸಿಬ್ಬಂದಿ ಹುದ್ದೆಗಳಿಗೆ ರೂ.200/–ಗಳ ಡಿಡಿಯನ್ನು **'ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,'** ಈ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ದಿನಾಂಕ 10.10.2014ರ ಸಂಜೆ 5:00ರ ಒಳಗಾಗಿ ತಲುಪುವಂತೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಛೇರಿಗೆ ಕಳುಹಿಸಿ. ಡಿಡಿಯ ಹಿಂಭಾಗದಲ್ಲಿ ತಮಗೆ ನೀಡಲಾದ ಪ್ರತ್ಯೇಕ ಅರ್ಜಿ ಸಂಖ್ಯೆ, ಹೆಸರು, ಅರ್ಜಿ ಸಲ್ಲಿಸಿರುವ ಹುದ್ದೆ, ಮೊಬೈಲ್ ಸಂಖ್ಯೆಯನ್ನು ನಮೂದಿಸಿ. ಆಯಾ ಹುದ್ದೆಗೆ ನಿಗದಿಪಡಿಸಿದ ಮೊತ್ತದ ಡಿಡಿಯನ್ನು ಲಗತ್ತಿಸಿಲ್ಲದ ಅರ್ಜಿಯನ್ನು ಅಥವಾ ನಿಗದಿತ ಸಮಯದ ನಂತರ ತಲುಪಿದ ಅರ್ಜಿಯನ್ನು ಅಥವಾ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಶುಲ್ಕವನ್ನು ಡಿಡಿ ರೂಪದಲ್ಲಿ ಮಾತ್ರ ಸ್ವೀಕರಿಸಲಾಗುವುದು.
3. ಅರ್ಜಿಯ ಜೊತೆ ಸ್ವಯಂ ದೃಢೀಕೃತ ಪಾಸ್‌ಪೋರ್ಟ್ ಅಳತೆಯ ಫೋಟೋ ಅಂಟಿಸುವುದು ಕಡ್ಡಾಯ.
4. ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸ ಬಯಸುವವರು ಆಯಾ ಹುದ್ದೆಯ ಶುಲ್ಕದ ಡಿಡಿಯೊಂದಿಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು. ಪ್ರತಿ ಅರ್ಜಿಯು ಪ್ರತ್ಯೇಕವಾದ ಲಕೋಟೆಯನ್ನು (ಕವರ್)ನ್ನು ಸಂಯುಕ್ತ ಸಹಕಾರಿಗೆ ಕಳುಹಿಸತಕ್ಕದ್ದು. ಪ್ರತಿ ಲಕೋಟೆ ಮೇಲೂ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತಿದೆಯೆಂಬುದನ್ನು ಸ್ಪಷ್ಟವಾಗಿ ದಪ್ಪ ಅಕ್ಷರದಲ್ಲಿ ಬರದಿರಬೇಕು.

**ಸೂಚನೆಗಳು :**

1. ಅರ್ಜಿ ಸಲ್ಲಿಸುವವರು ಕ್ರಮಬದ್ಧವಾದ ಇ–ಮೈಲ್ ಐ.ಡಿ ಮತ್ತು ಮೊಬೈಲ್ ಸಂಖ್ಯೆಯನ್ನು ಹೊಂದಿರತಕ್ಕದ್ದು. ಅರ್ಜಿಯನ್ನು ಸಲ್ಲಿಸಿದ ನಂತರ ಮುಂದಿನ ಎಲ್ಲಾ ಸೂಚನೆಗಳನ್ನು ಇಮೇಲ್ ಮತ್ತು ಎಸ್‌ಎಂಎಸ್‌ಗಳ ಮೂಲಕ ತಿಳಿಸಲಾಗುವುದು.
2. ಎಲ್ಲಾ ಹುದ್ದೆಗಳಿಗೂ ಕನ್ನಡದಲ್ಲಿ ಓದಲು, ಬರೆಯಲು ಮತ್ತು ಮಾತನಾಡಲು ತಿಳಿದಿರುವುದು ಕಡ್ಡಾಯ.
3. ಸಂಯುಕ್ತ ಸಹಕಾರಿಯ ಸೇವೆಗೆ ಆಯ್ಕೆಯಾದ ಅಭ್ಯರ್ಥಿಯು ಎರಡು ವರ್ಷಗಳ ಕಾಲ ಪರಿಕ್ಷಾರ್ಥ ಸೇವಾ ಅವಧಿಯನ್ನು ಹೊಂದಿರುತ್ತಾರೆ. ತೃಪ್ತಿದಾಯಕ ಸೇವಾ ಅವಧಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಯ ಸೇವೆಯನ್ನು ಖಾಯಮಾತಿ ಗೊಳಿಸಲಾಗುತ್ತದೆ.
4. ಪರೀಕ್ಷಾರ್ಥ ಅವಧಿಯಲ್ಲಿ ಕಿರಿಯ ಅಧಿಕಾರಿ/ಅಭಿವೃದ್ಧಿ ಅಧಿಕಾರಿ/ಡಿಸೈನರ್ ಹುದ್ದೆಯ ಅಭ್ಯರ್ಥಿಗಳಿಗೆ ಮಾಸಿಕ ರೂ.13,000/–, ಸ್ಟೆನೋಗ್ರಾಫರ್/ಕಿರಿಯ ಸಹಾಯಕ ಹುದ್ದೆಯ ಅಭ್ಯರ್ಥಿಗಳಿಗೆ ಮಾಸಿಕ ರೂ. 10,000/– ಹಾಗೂ ಉಪಸಿಬ್ಬಂದಿಗಳಿಗೆ ಮಾಸಿಕ ರೂ.7,000/–ಗಳ ಕ್ರೋಢೀಕೃತ ವೇತನವನ್ನು ನೀಡಲಾಗುತ್ತದೆ.
5. ಸೇವಾ ಖಾಯಮಾತಿಯ ನಂತರ ಆಯಾ ಹುದ್ದೆಗಳಿಗನುಗುಣವಾಗಿ ಈ ಕೆಳಗಿನಂತೆ ವೇತನ ಶ್ರೇಣಿಯನ್ನು ನೀಡಲಾಗುತ್ತದೆ.

| | |
|---|---|
| ಅ. ಕಿರಿಯ ಅಧಿಕಾರಿ/ಅಭಿವೃದ್ಧಿ ಅಧಿಕಾರಿ/ಡಿಸೈನರ್: | 14550–350–15600–400–17200–450–19000–500–21000–600–24600–700–26700 |
| ಆ. ಶೀಘ್ರಲಿಪಿಕಾರ(ಸ್ಟೆನೋಗ್ರಾಫರ್) : | 11600–200–12000–250–13000–300–14200–350–15600–400–17200–450–19000–500–21000 |
| ಇ. ವಾಹನ ಚಾಲಕ: | 11000–200–12000–250–13000–300–14200–350–15600–400–17200 |
| ಈ. ಕಿರಿಯ ಸಹಾಯಕ: | 10,600–200–12000–250–13000–300–14200–350–15600–400–16400 |
| ಉ. ಉಪ ಸಿಬ್ಬಂದಿ: | 9600–200–12000–250–13000–300–14200–350–14550 |

ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ಮತ್ತು ನಗರ ಪರಿಹಾರ ಭತ್ಯೆಗಳು ಆಡಳಿತ ಮಂಡಲಿಯು ಕಾಲ ಕಾಲಕ್ಕೆ ನಿಗದಿಪಡಿಸಿದ ದರದಲ್ಲಿ ಇರತ್ತವೆ.

6. ವಿದ್ಯಾರ್ಹತೆ ಹಾಗೂ ಅನುಭವದ ಅಸಲಿ ದಾಖಲಾತಿಗಳನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸುವುದು ಕಡ್ಡಾಯ.
7. ಎಲ್ಲಾ ಹುದ್ದೆಗಳಿಗೂ ಕಂಪ್ಯೂಟರ್ ಜ್ಞಾನ ಅವಶ್ಯಕ.
8. ನಿಗದಿಪಡಿಸಿರುವ ಹುದ್ದೆಗಳ ಸಂಖ್ಯೆಯನ್ನು ಮುನ್ಸೂಚನಾರಹಿತವಾಗಿ ಮರುನಿಗದಿಗೊಳಿಸಬಹುದಾಗಿರುತ್ತದೆ.
9. ಅರ್ಹ ಅಭ್ಯರ್ಥಿಗಳ ಆಯ್ಕೆಯನ್ನು ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನದ ಆಧಾರದ ಮೇಲೆ ಮಾಡಲಾಗುವುದು. ಆದಾಗ್ಯೂ ಸಂಯುಕ್ತ ಸಹಕಾರಿಯು ಈ ವಿಧಾನದಲ್ಲಿ ಯಾವುದೇ ಬದಲಾವಣೆಯನ್ನು ಮುನ್ಸೂಚನಾರಹಿತವಾಗಿ ಮಾಡಬಹುದು.
10. ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನಕ್ಕೆ ಕರೆಯಲ್ಪಟ್ಟ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಹಾಜರಾಗತಕ್ಕದ್ದು. ಯಾವುದೇ ಪ್ರಯಾಣ ಭತ್ಯೆ/ದಿನಭತ್ಯೆಗಳನ್ನು ನೀಡಲಾಗುವುದಿಲ್ಲ.
11. ಸಂಯುಕ್ತ ಸಹಕಾರಿಯು ಯಾವುದೇ ಅರ್ಜಿಯನ್ನು ಕಾರಣವನ್ನು ನೀಡದೆ ತಿರಸ್ಕರಿಸಬಹುದಾಗಿರುತ್ತದೆ.
12. ಸಂಯುಕ್ತ ಸಹಕಾರಿಯಲ್ಲಿ ಈಗಾಗಲೇ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಆದ್ಯತೆ ನೀಡಲಾಗುವುದು.
13. ಸಂಯುಕ್ತ ಸಹಕಾರಿಯು ಯಾವುದೇ ಹುದ್ದೆಗೆ ಸಂಬಂಧಿಸಿದಂತೆ ಬೇರೆ ಬೇರೆಯಾದ ಸೇವಾ ಷರತ್ತುಗಳನ್ನು ವಿಧಿಸಬಹುದಾಗಿದೆ.
14. ಆಯ್ಕೆಯಾದ ಅಭ್ಯರ್ಥಿಗಳು ಸಂಯುಕ್ತ ಸಹಕಾರಿಯ ಸೇವಾ ನಿಯಮಗಳಿಗೆ ಒಳಪಟ್ಟಿರುತ್ತಾರೆ.
15. ನೇಮಕಾತಿಗೆ ಸಂಬಂಧಿಸಿದ ಇನ್ನಿತರ ಯಾವುದೇ ಮಾಹಿತಿಯನ್ನು ವೆಬ್‌ಸೈಟ್ ಮೂಲಕ ಅಥವಾ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕ
ಮತ್ತು
ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ

# ನವೆಂಬರ್ 1 ಮತ್ತು 2ರಂದು ಗೋವಾದಲ್ಲಿ ಪತ್ತಿನ ಸಹಕಾರ ಸಂಘಗಳ ಪ್ರಥಮ ಅಧಿವೇಶನ

ಸಹಕಾರ ಭಾರತಿ ಆಶ್ರಯದಲ್ಲಿ ಅಖಿಲ ಭಾರತ ಮಟ್ಟದ ಪತ್ತಿನ (Credit Society's) ಸಹಕಾರಿಗಳ ರಾಷ್ಟ್ರೀಯ ಮಟ್ಟದ ಪ್ರಥಮ ಅಧಿವೇಶನವು ನವೆಂಬರ್ 1 ಮತ್ತು 2 ರಂದು ಗೋವಾ ರಾಜ್ಯದ ಪಣಜಿಯಲ್ಲಿ ಜರುಗಲಿದೆ ಜುಲೈ 29 ರಂದು ಗೋವಾದಲ್ಲಿ ಜರುಗಿದ ಸಹಕಾರ ಭಾರತೀಯ ರಾಷ್ಟ್ರೀಯ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಸಹಕಾರ ಭಾರತೀಯ ಕರ್ನಾಟಕ ಪತ್ತಿನ ಸಹಕಾರ ಸಂಘಗಳ ವಿಭಾಗದ ಮುಖ್ಯಸ್ಥರಾದ ಶ್ರೀ ಬಿ. ರಾಜಶೇಖರ ತಿಳಿಸಿದ್ದಾರೆ.

ಪತ್ತಿನ ಸಹಕಾರಿಗಳು ಎದುರಿಸುತ್ತಿರುವ ಅನೇಕ ಜ್ವಲಂತ ಸಮಸ್ಯೆಗಳನ್ನು ಅಧಿವೇಶನದಲ್ಲಿ ಚರ್ಚಿಸಲು ನಿರ್ಧರಿಸಲಾಗಿದೆ. ಸಹಕಾರ ಭಾರತಿಯ ಚರ್ಚೆಗಳು ನಡೆಯಲಿದೆ. ವಿಶೇಷವಾಗಿ ಸಹಕಾರ ಸಂಘಗಳಲ್ಲಿ ಸದಸ್ಯರು ತೊಡಗಿಸುವ ಠೇವಣಿಗಳಿಗೆ ವಿಮಾ ಭದ್ರತೆಯ ಬಗ್ಗೆ, ಆದಾಯ ತೆರಿಗೆ ಇಲಾಖೆಯ ಅನೇಕ ಗೊಂದಲುಗಳು ಹಾಗೂ ಆದಾಯ ತೆರಿಗೆ ಸೆಕ್ಷನ್ 80 ಪಿ ಹಾಗೂ ಸೆಕ್ಷನ್ 269 ಎಸ್ ಎಸ್ ಬಗ್ಗೆಯು ಚರ್ಚೆಗಳು ನಡೆಯಲಿವೆ.

ಪತ್ತಿನ ಸಹಕಾರಿಗಳು ಸಹಕಾರಿಯ ಉದ್ದೇಶಕ್ಕಾಗಿ ಸ್ಥಿರಾಸ್ತಿ ಖರೀದಿಸುವ ಸಂದರ್ಭದಲ್ಲಿ ಶುಲ್ಕ ವಿನಾಯಿತಿಗೆ ಕೋರಲು ಯೋಚಿಸಲಾಗುತ್ತಿದೆ. ಪತ್ತಿನ ಸಹಕಾರಿಗಳು ಬ್ಯಾಂಕುಗಳಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದ್ದರು ಕಳೆದ 15 ವರ್ಷಗಳಿಂದ ಭಾರತೀಯ ರಿಜರ್ವ ಬ್ಯಾಂಕ್ ಅವಕಾಶ ನೀಡದೆ ಇರುವುದರು ಬಗ್ಗೆಯೂ ಚರ್ಚೆಗಳು ನಡೆಯಲಿದೆ. ಅನೇಕ ರಾಜ್ಯಗಳಲ್ಲಿ ಸಹಕಾರಿ ಕಾಯ್ದೆಗಳಲ್ಲಿರುವ ಗೊಂದಲವನ್ನು ನಿವಾರಿಸುವ ಬಗ್ಗೆಯು ಚರ್ಚೆಗಳು ನಡೆಯಲಿದೆ.

ಅಧಿವೇಶನದಲ್ಲಿ ಕೇಂದ್ರದ ಅರ್ಥಸಚಿವರು, ಆರ್ಥಿಕ ಇಲಾಖೆಯ ಅನೇಕ ಅಧಿಕಾರಿಗಳು, ಕೇಂದ್ರದ ಕೃಷಿ ಸಚಿವರು, (Central Direct Tax Board) ಕೇಂದ್ರ ನೇರ ತೆರಿಗೆ ಮಂಡಳಿ ಅಧ್ಯಕ್ಷರು, ಭಾರತೀಯ ರಿಜರ್ವ್ ಬ್ಯಾಂಕ್ ಅಧಿಕಾರಿಗಳು, (International Co-operative Alliance) ಅಂತರಾಷ್ಟ್ರೀಯ ಸಹಕಾರಿಗಳ ಪ್ರತಿನಿಧಿಗಳು, ಎಲ್ಲಾ ರಾಜ್ಯಗಳ ಸಹಕಾರ ಸಚಿವರುಗಳನ್ನು ಅಧಿವೇಶನಕ್ಕೆ ಆಹ್ವಾನಿಸಲಾಗುತ್ತಿದೆ. ಅಧಿವೇಶನದಲ್ಲಿ ಭಾಗವಹಿಸಲು ಅಪೇಕ್ಷಿಸುವ ಸಹಕಾರ ಸಂಘಗಳ ಪದಾಧಿಕಾರಿಗಳು ಸೆಪ್ಟೆಂಬರ್ 30ರ ಒಳಗಾಗಿ ರೂ. 1,200.00 ಶುಲ್ಕವನ್ನು ಪಾವತಿಸುವ ಮೂಲಕ ಸಹಕಾರ ಭಾರತಿಯಲ್ಲಿ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ : ಶ್ರೀ ಬಿ ರಾಜ್‌ಶೇಖರ್ ರಾಜ್ಯ ಪತ್ತಿನ ಸಹಕಾರ ಸಂಘಗಳ ಪ್ರಮುಖ್ –9448219500

# ಹೈದ್ರಾಬಾದ್ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ನಿ., : 5ನೇ ವಾರ್ಷಿಕ ಮಹಾಸಭೆ

ಹೈದ್ರಾಬಾದ್ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ನಿ. ಶಹಾಪುರ, ದಿನಾಂಕ : 27–7–2014 ರಂದು 5ನೇ ವಾರ್ಷಿಕ ಮಹಾಸಭೆಯನ್ನು ಹಮ್ಮಿಕೊಳ್ಳಲಾಯಿತು. ಅಧ್ಯಕ್ಷರಾದ ಶ್ರೀ ಗುರುಲಿಂಗಪ್ಪ ಕಾಮಾ ಇವರು ಸಭೆಯ ಉದ್ಘಾಟನೆಯನ್ನು ಮಾಡಿದರು. ಎಲ್ಲಾ ನಿರ್ದೇಶಕರು ಸಿಬ್ಬಂಧಿ ವರ್ಗದವರು ಹಾಗೂ ಷೇರುದಾರರು ಸಭೆಯಲ್ಲಿ ಹಾಜರಿದ್ದರು. ಹೈದ್ರಾಬಾದ್ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ನಿ. ಶಹಾಪುರ ಇದು 2013–14 ರಲ್ಲಿ ರೂ. 13,70,54,718–78 ರಷ್ಟು ವ್ಯವಹರಿಸಿದ್ದು, ರೂ. 8,07,455–18 ರಷ್ಟು ನಿವ್ವಳ ಲಾಭ ಬಂದಿರುತ್ತದೆ.

2013–14ನೇ ಸಾಲಿನಿಂದ ಸಂಸ್ಥೆಯ ವತಿಯಿಂದ ಇಫ್ಕೋ ಟೊಕಿಯೊ ವಿಮೆಯನ್ನು ಎಲ್ಲಾ ಷೇರುದಾರರಿಗೆ ಮಾಡಿಲಾಗಿದ್ದು. ಪ್ರತಿವರ್ಷವೂ ಇದನ್ನು ಸಂಸ್ಥೆಯ ವತಿಯಿಂದ ನವಿಕರಿಸಲಾಗುವುದು. ಇನ್ನುಳಿದಂತೆ ಸಂಸ್ಥೆಯಲ್ಲಿ ಆರ್ ಟಿ ಜಿ ಎಸ್, ಎನ್ ಇ ಎಫ್ ಟಿ, ಮೂರನೇ ವ್ಯಕ್ತಿಯ ಚೆಕ್ ಕ್ಲಿಯರೆನ್ಸ್ ಮತ್ತು ಆಟ್ ಪಾರ್ ಚೆಕ್‌ಗಳ ಸೌಲಭ್ಯ, ಇ–ಸ್ಟ್ಯಾಂಪಿಂಗ್ ಸೌಲಭ್ಯಗಳೊಂದಿಗೆ, ಯಶಸ್ವಿನಿ ವಿಮಾ ಯೋಜನೆಯ ಸೌಲಭ್ಯವು ದೊರಕಿಸಿ ಕೊಡಲಾಗುತ್ತಿದೆ.

# ಉದಯ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ವಾರ್ಷಿಕ ಸಭೆ



ಉದಯ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ 2013–14ನೇ ಸಾಲಿನ 19ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ದಿನಾಂಕ 27–07–2014ರಲ್ಲಿ, ಸಹಕಾರ ಸಮುದಾಯ ಭವನ, ಪ್ರಾದೇಶಿಕ ಸಹಕಾರ ನಿರ್ವಹಣಾ ತರಭೇತಿ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಶ್ರೀಮತಿ ಸಾಲುಮರದ ತಿಮ್ಮಕ್ಕ (ಸಮಾಜ ಸೇವಕರು) ಶ್ರೀ ಹೆಚ್.ಎಸ್. ದೊರೆಸ್ವಾಮಿ (ಹಿರಿಯ ಸಾತಂತ್ರ್ಯ ಹೋರಾಟಗಾರರು) ಮತ್ತು ಶ್ರೀ ಸಿ.ವಿ.ಶಿವಶಂಕರ್ (ಚಲನಚಿತ್ರ ನಿರ್ಮಾಪಕರು, ನಿರ್ದೇಶಕರು ಮತ್ತು ಸಾಹಿತಿಗಳು) ಹಾಗೂ, ಸಹಕಾರಿಯ ಹತ್ತು ಹಿರಿಯ ಸದಸ್ಯರುಗಳು ಮತ್ತು ಸಿಬ್ಬಂದಿ ವರ್ಗದವರನ್ನು ಸನ್ಮಾನಿಸಲಾಯಿತು.



ಸಿಂಧನೂರಿನ ಶ್ರೀಗುರು ಬಸವಲಿಂಗಾಯನಮಃ ಮುಕ್ತ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ದಿನಾಂಕ : 17–8–2014ರಂದು 3ನೇ ವಾರ್ಷಿಕ ಸರ್ವ ಸದಸ್ಯರ ಸಭೆ ಜರುಗಿತು.



ಶ್ರೀಸಿದ್ದಗಂಗಾ ವಿದ್ಯಾಸಂಸ್ಥೆ ನೌಕರರ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಇದರ 26 ನೇ ವಾರ್ಷಿಕ ಸಭೆಯನ್ನು ದಿನಾಂಕ 26.07.2014ರಂದು ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ನಡೆಸಲಾಯಿತು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ಭಾಗವಹಿಸಿದ್ದರು.



ದಾವಣಗೆರೆ ಶ್ರೀ ದಾನೇಶ್ವರಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ.,ಇದರ ಆಡಳಿತ ಕಛೇರಿ ಉದ್ಘಾಟನೆ ಸಮಾರಂಭವನ್ನು ಶ್ರೀ ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ ಇವರ ಸನ್ನಿಧಿಯಲ್ಲಿ ನೆರವೇರಿತು.

## ಸೂರ್ಯ ಸೌಹಾರ್ದ ಸಹಕಾರಿ ನಿಯಮಿತ ಮೈಸೂರು ಇದರ ಪ್ರಥಮ ಸರ್ವ ಸದಸ್ಯರ ಸಭೆ ಹಾಗೂ ಸದಸ್ಯರ ಶಿಕ್ಷಣ ಕಾರ್ಯಾಗಾರ



ಸೂರ್ಯ ಸೌಹಾರ್ದ ಸಹಕಾರಿ ನಿಯಮಿತ ಮೈಸೂರು ಇದರ ಪ್ರಥಮ ಸರ್ವ ಸದಸ್ಯರ ಸಭೆ ಹಾಗೂ ಸದಸ್ಯರ ಶಿಕ್ಷಣ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಕಾರ್ಯಾಗಾರದಲ್ಲಿ ಸದಸ್ಯರ ಜವಾಬ್ದಾರಿ ಹಾಗೂ ಹಾಗು ಕರ್ತವ್ಯಗಳ ಬಗ್ಗೆ ಶ್ರೀಯುತ ಯಶವಂತ ಡೋಂಗ್ರೆ ಪ್ರಾಧ್ಯಾಪಕರು ಮೈಸೂರು ವಿಶ್ವವಿದ್ಯಾಲಯ ಇವರು ಉಪನ್ಯಾಸನೀಡಿದರು. ಸಹಕಾರಿ ಅಧ್ಯಕ್ಷ ಶ್ರೀ ವಿ.ವೆಂಕಟೇಶ್‌ರವರು ಮಾತನಾಡಿ ನಮ್ಮ ಸಹಕಾರಿ ರಾಜ್ಯದ ವ್ಯಾಪ್ತಿಯನ್ನು ಹೊಂದಿದೆ ರಾಜ್ಯಾದ್ಯಂತ ಉತ್ತಮ ಸೇವೆಯನ್ನು ನೀಡುವ ಸಹಕಾರಿ ಗ್ರಾಹಕ ಹಾಗೂ ಮಾರಾಟ ವ್ಯವಸ್ಥೆಯನ್ನು ಹಮ್ಮಿಕೊಳ್ಳುವುದು ನಮ್ಮ ಉದ್ದೇಶವಾಗಿದೆ.

ಈ ಬಗ್ಗೆ ಸದಸ್ಯರಿಗೆ ಹೆಚ್ಚಿನ ತಿಳುವಳಿಕೆ ಅಗತ್ಯವಾಗಿದ್ದುದರಿಂದ ನಮ್ಮ ವಿನಂತಿ ಮೇರೆಗೆ ಸಂಯುಕ್ತ ಸಹಕಾರಿಯ ವತಿಯಿಂದ ಈ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು ಕಾರ್ಯಕ್ರಮದಲ್ಲಿ ಸಹಕಾರಿಯ 200ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು

## ಹಿರಿಯ ನಾಗರಿಕರ ಗುರುತಿನ ಚೀಟಿ ವಿತರಣೆಯ ಅನುಮತಿ

ಹೊಸಕೋಟೆ ಶ್ರೀ ಸತ್ಯ ಸಾಯಿ ಸೌಹಾರ್ದ ಸಹಕಾರಿ ನಿಯಮಿತ ಇವರಿಗೆ ಕರ್ನಾಟಕ ಸರ್ಕಾರದ ಬೆಂಗಳೂರು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ತಾಲ್ಲೂಕಿನ ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ನೀಡಲು ಅನುಮತಿ ನೀಡಿದ್ದಾರೆ. ಇದು ಸೌಹಾರ್ದ ಸಹಕಾರಿಗಳಗೆ ಒಂದು ಉತ್ತಮ ಸೇವಾ ಅವಕಾಶವಾಗಿದ್ದು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಇದರಂತೆಯೇ ತಮ್ಮ ಜಿಲ್ಲೆಯ ಅಂಗವಿಕಲರ ಕಲ್ಯಾಣ ಅಧಿಕಾರಿರವರನ್ನು ಭೇಟಿಮಾಡಿ ಈ ಸೇವಾ ಸೌಲಭ್ಯವನ್ನು ಹಿರಿಯ ನಾಗರಿಕರಿಗೆ ಒದಗಿಸಲು ಸೂಚಿಸಿದೆ.



# ಭಾರತ ಕಂಡ ಅಗ್ರಗಣ್ಯ ಶಿಕ್ಷಕ ಡಾ. ರಾಧಾಕೃಷ್ಣನ್

ಸರ್ವೆಪಲ್ಲಿ ರಾಧಾಕೃಷ್ಣನ್ ಭಾರತದ ಖ್ಯಾತ ತತ್ವಶಾಸ್ತ್ರಜ್ಞ ಹಾಗೂ ಗೌರವಾನ್ವಿತ ರಾಜನೀತಿಜ್ಞರಾಗಿದ್ದರು. 1962–1967 ಅವಧಿಯಲ್ಲಿ ಭಾರತದ ರಾಷ್ಟ್ರಪತಿಗಳಾಗಿದ್ದ ಡಾ.ಸರ್ವೆಪಲ್ಲಿ ರಾಧಾಕೃಷ್ಣನ ಶಿಕ್ಷಕರೆಡೆಗೆ ಅಪಾರ ಪ್ರೀತಿ, ಗೌರವ, ಹೊಂದಿದ್ದರು, ಸ್ವತಃ ಶಿಕ್ಷಕರಾಗಿ ಹಲವಾರು ವರ್ಷಗಳ ಕಾಲ ಸೇವೆಗೈದಿರುವ ಡಾ.ರಾಧಾಕೃಷ್ಣನ್ ನಮ್ಮ ದೇಶ ಕಂಡ ಅಗ್ರಗಣ್ಯ ಶಿಕ್ಷಕರು.

ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ 1962ರಲ್ಲಿ ಭಾರತದ ರಾಷ್ಟ್ರಪತಿಯಾದಾಗ ಅವರ ಶಿಷ್ಯರು ಮತ್ತು ಸ್ನೇಹಿತರು ಸೆಪ್ಟೆಂಬರ್ 5 ರಂದು ತಮ್ಮ ಹುಟ್ಟಿದ ದಿನವನ್ನು ಆಚರಿಸಲು ಬಯಸಿದಾಗ, ತಮ್ಮ ಶಿಕ್ಷಕ ಹುದ್ದೆಯನ್ನು ಅಪಾರ ಗೌರವಿಸುತಿದ್ದ ರಾಧಾಕೃಷ್ಣನ್, ನೀವು ನನ್ನ ಹುಟ್ಟಿದ ದಿನವನ್ನು ಆಚರಿಸುವುದಾದರೆ ಇಂದಿನಿಂದ "ಸೆಪ್ಟೆಂಬರ್ 5"ನ್ನು ಶಿಕ್ಷಕರ ದಿನವನ್ನಾಗಿ ಆಚರಿಸಿ ಎಂದು ಹೇಳಿದರು. ಅಂದಿನಿಂದ ಅವರ ಜನ್ಮದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸುತ್ತಾ ಬರಲಾಗಿದೆ. ಆ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಮತ್ತು ಅವರಿಗೆ ಗೌರವ ಸಲ್ಲಿಸಲಾಗುತ್ತಿದೆ.

# ಸಿಂಧನೂರು ಪತ್ತಿನ ಸೌಹಾರ್ದ ಸಹಕಾರಿಗೆ ನಬಾರ್ಡ್ ಮುಖ್ಯಸ್ಥ ಶ್ರೀ ಜಿ.ಆರ್. ಚಿಂತಲ ಭೇಟಿ

ಗ್ರಾಮೀಣಾಭಿವೃದ್ಧಿ ಕಾರ್ಯದಲ್ಲಿ ನಬಾರ್ಡ್ ದೇಶದಲ್ಲಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವ ಜೊತೆಗೆ ಇತರೆ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ ಮುಂದೆ ಅವಕಾಶಗಳು ಲಭ್ಯವಾದರೆ ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳ ಜೊತೆಗೆ ಸೇರಿ ಇನ್ನು ಹೆಚ್ಚಿನ ಸೇವೆಯನ್ನು ನೀಡುವ ಪ್ರಯತ್ನ ಮಾಡಲಾಗುವುದು ಎಂದು ನಬಾರ್ಡ್‌ನ ಮುಖ್ಯ ಮಹಾ ಪ್ರಭಂದಕ (Chief General Manager) ಶ್ರೀ ಜಿ ಆರ್ ಚಿಂತಲ ಹೇಳಿದರು.

ರಾಯಚೂರು ಜಿಲ್ಲೆ ಸಿಂಧನೂರಿನ ಸಿಂಧನೂರು ಪತ್ತಿನ ಸೌಹಾರ್ದ ಸಹಕಾರಿಗೆ ದಿನಾಂಕ:12.08.2014 ರಂದು ಭೇಟಿ ನೀಡಿ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಪ್ರಮುಖ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಜೊತೆಯಲ್ಲಿ ಉಭಯ ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ನಡೆಸಿದ ಸಂವಾದದಲ್ಲಿ ಮಾತನಾಡುತ್ತಾ ಮುಂದಿನ ದಿನಗಳಲ್ಲಿ ನಬಾರ್ಡ್ ಕೈಗೊಳ್ಳುವ ಕಾರ್ಯಗಳಲ್ಲಿ ಸಾಧ್ಯವಾದರೆ ಸೌಹಾರ್ದ ಸಹಕಾರಿಗಳ ಜೊತೆ ಸೇರಿ ಕಾರ್ಯಕ್ರಮಗಳನ್ನು ರೂಪಿಸುವ ಪ್ರಯತ್ನವನ್ನು ಮಾಡಲಾಗುವುದು ಎಂದ ಅವರು ಅನೇಕ ಸೌಹಾರ್ದ ಸಹಕಾರಿಗಳು ರಾಜ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ತಮ್ಮ ಬಳಿ ಸಾಕಷ್ಟು ಮಾಹಿತಿ ಇದೆ ಎಂದರು.

ಮುಂದಿನ ದಿನಗಳಲ್ಲಿ ಆಸಕ್ತ ಸೌಹಾರ್ದ ಸಹಕಾರಿಗಳಿಗೆ ಹಣಕಾಸಿನ ನಿರ್ವಾಹಣೆ, ಸಂಸ್ಥೆಯ ಆಡಳಿತ ನಿರ್ವಾಹಣೆ, ಅಭಿವೃದ್ಧಿ ಕೌಶಲ್ಯಕ್ಕೆ ಸಂಬಧಿಸಿದಂತೆ ಹಾಗೂ ಬ್ಯಾಂಕಿಗ್ ನಿರ್ವಾಹಣೆಯ ಬಗ್ಗೆ ತರಬೇತಿಯನ್ನು "ನಬಾರ್ಡ್" ನೀಡಲು



ಸಿದ್ಧವಿರುವುದಾಗಿ ಹೇಳಿದರು. ನಬಾರ್ಡ್‌ನ ಉಪ ಮಹಾ ಪ್ರಭಂದಕ (Assistant General Manager) ಶ್ರೀ ಜೋತಿ ಜಗನ್ನಾಥ, ರಾಯಚೂರು ಜಿಲ್ಲಾ ನಬಾರ್ಡ್ ಮುಖ್ಯಸ್ಥರಾದ ಶ್ರೀ ನಾರಾಯಣ ರಾಜು ಸಂವಾದದಲ್ಲಿ ಭಾವಹಿಸಿದ್ದರು.

ಆರಂಭದಲ್ಲಿ ಅತಿಥಿಗಳನ್ನು ಸ್ವಾಗತಿಸಿ ಮಾತನಾಡಿದ ಸಿಂಧನೂರು ಪತ್ತಿನ ಸೌಹಾರ್ದ ಸಹಕಾರಿ ಅಧ್ಯಕ್ಷರಾದ ಶ್ರೀ ಬಿ ರಾಜಶೇಖರ ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿಗಳ ಬೆಳವಣಿಗೆಗಳ ಬಗ್ಗೆ ಮಾಹಿತಿಯನ್ನು ನೀಡುವ ಜೊತೆಗೆ ಅತಿಥಿಗಳಲ್ಲಿ ಸೌಹಾರ್ದ ಕಾಯ್ದೆ ಹಾಗೂ ಸಹಕಾರಿಗಳ ಬಗ್ಗೆ ಇರುವ ತಪ್ಪು ಮಾಹಿತಿಯ ಬಗ್ಗೆ ಸ್ಪಷ್ಟನೆ ನೀಡಿದರು. ರಾಯಚೂರು ಕೊಪ್ಪಳ ಜಿಲ್ಲೆಗಳ ಪ್ರಮುಖ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಆಡಳಿತ ಮಂಡಳಿ ಸದಸ್ಯರು ಭಾಗವಹಿಸಿದ್ದರು.

# ಸಹಕಾರ ಸಂಘಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಅದರ ಪರಿಕಲ್ಪನೆ ಹಾಗೂ ಸಿಬ್ಬಂದಿಗಳು ತಿಳಿದಿರಲೇಬೇಕಾದ ನೀತಿ ನಿಯಮಗಳು – ಒಂದು ಚಿಂತನೆ



▸▸ **ಎನ್.ಎಂ. ಶಿವಕುಮಾರ್,** ಪ್ರಾಂಶುಪಾಲರು, ಕೆ.ಐ.ಸಿ.ಎಂ., ಮಡಿಕೇರಿ.

ಮಾನವ ಸಂಪನ್ಮೂಲದ ಅಭಿವೃದ್ಧಿಯು ಸಹಕಾರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಡಳಿತ ಮಂಡಳಿ ಹಾಗೂ ವಿಶೇಷವಾಗಿ ದುಡಿಯುವ ನೌಕರರಿಗೆ ಸಂಬಂಧಿಸಿದೆ. ರಾಜ್ಯದ ಪ್ರತಿಯೊಂದು ಸಹಕಾರ ಸಂಸ್ಥೆಗಳಲ್ಲಿ ಸಿಬ್ಬಂದಿ ವರ್ಗದವರು ತಮಗೆ ಸಂಬಂದಪಟ್ಟ ಕರ್ತವ್ಯ ಮತ್ತು ಜವಾಬ್ದಾರಿಗಳಿಗೆ ಅನುಗುಣವಾಗಿ ಹಂತ ಹಂತವಾಗಿ ಕೆಳಮಟ್ಟದ ಸಿಬ್ಬಂದಿಗಳಿಗೆ ಉನ್ನತ ಮಟ್ಟದ ಅಧಿಕಾರಿಗಳವರೆವಿಗೂ ಬೆಳವಣಿಗೆ ಮತ್ತು ಬದಲಾವಣೆಯಾಗುತ್ತಿರಬೇಕು. ಇಂದಿನ ಆಧುನಿಕ ಮತ್ತು ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿ ವರ್ಗದವರು ತಂತ್ರಜ್ಞಾನಗಳನ್ನೊಳಗೊಂಡಂತೆ ನಿರಂತರ ಜ್ಞಾನ ಸಂಪಾದನೆ, ವೃತ್ತಿಪರತೆಯ ಕೌಶಲ್ಯತೆ ಹೆಚ್ಚಿಸಿಕೊಳ್ಳುವುದರಮೂಲಕ ವ್ಯಕ್ತಿತ್ವದ ವಿಕಸನದೊಂದಿಗೆ ಸಂಸ್ಥೆಗೆ ಗರಿಷ್ಟಮಟ್ಟದ ಕೊಡುಗೆ ನೀಡಬೇಕು.

ಮಾನವ ಸಂಪನ್ಮೂಲ ಅಭಿವೃದ್ಧಿ ಬಗ್ಗೆ ಈಗಾಗಲೇ ನೂರಾರು ಚಿಂತನೆ ಮಂಥನ ಕಾರ್ಯ ನಡೆದಿವೆ ಹಾಗೂ ಹಲವಾರು ಲೇಖನಗಳು ಹೊರ ಬಂದಿವೆ. ಆದರೆ ಇಂದಿಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಬಗ್ಗೆ ವಿಶೇಷ ಪ್ರಯತ್ನಗಳು ನಡೆದಿರುವುದಿಲ್ಲ. ಅದರ ಪರಿಕಲ್ಪನೆ ಸವಿಸ್ತಾರವಾಗಿದ್ದು, ಸಹಕಾರ ರಂಗದಲ್ಲಿ ಸಿಬ್ಬಂದಿ ವರ್ಗದವರು ಹೊಸ ಸವಾಲುಗಳನ್ನು ಎದುರಿಸಲುವ ಸಾಮರ್ಥ್ಯದ ಬೆಳವಣಿಗೆ ಅವಶ್ಯಕವಾಗಿದೆ. ಆದ್ದರಿಂದಲೇ ಚುನಾಯಿತ ಪ್ರತಿನಿಧಿಗಳು ಹಾಗೂ ಸಿಬ್ಬಂದಿ ವರ್ಗ, ಗ್ರಾಹಕರಿಗೆ ಗುಣಮಟ್ಟದ ಸೇವೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವುದು ಇಂದಿನ ಗುರಿಯಾಗಿದೆ. ಇವರನ್ನು ಒಂದೇ ವೇದಿಕೆಯಲ್ಲಿ ತಂದು ತಿಳಿವಳಿಕೆ ಕೊಡುವುದು ಅವಶ್ಯವಿದೆ. ಈ ತಿಳಿವಳಿಕೆಯಲ್ಲಿ ಸಹಕಾರ ಶಿಕ್ಷಣದ ವಿನ್ಯಾಸ, ಸಹಕಾರ ಕ್ಷೇತ್ರದ ಸೌಲಭ್ಯಗಳು ಮತ್ತು ನಿಯಮಗಳ ಪರಿಕಲ್ಪನೆಯ ಬಗ್ಗೆ ಹೆಚ್ಚು ಒತ್ತುಕೊಟ್ಟು ತಿಳಿಸಬೇಕಾಗಿದೆ. ಪ್ರಜ್ಞಾವಂತ ಚುನಾಯಿತ ಪ್ರತಿನಿಧಿಗಳು, ಕೆಲಸದ ಸಂಸ್ಕೃತಿ ಮೈಗೂಡಿಸಿಕೊಂಡ ಸಿಬ್ಬಂದಿ ವರ್ಗ ಹಾಗೂ ನಿರ್ವಾಹಕರು ವ್ಯವಸ್ಥೆಯ ಬೆನ್ನೆಲುಬು ಆಗಿರುತ್ತಾರೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಹಕಾರ ಕ್ಷೇತ್ರದಲ್ಲಿ ತನ್ನದೇ ಆದ ವಿಶಿಷ್ಟ ಪಾತ್ರವನ್ನು ಹೊಂದಿದೆ. ಇವರ ಜೊತೆಗೆ ಆಡಳಿತ ಮಂಡಳಿಯವರು ಸದಸ್ಯರು ಸಿಬ್ಬಂದಿ ವರ್ಗ ಸಮಾಜದಿಂದಲೇ ಬಂದವರಾದ್ದರಿಂದ ಸಮಾಜಿಕ ಜವಾಬ್ದಾರಿ ಹಾಗೂ ಕಳಕಳಿಯ ಕಡೆಗೆ ಗಮನ ಹರಿಸುವಂತೆ ಮಾಡಬೇಕಾಗಿದೆ.

'ಹರಿಯುವ ನೀರಿನಂತೆ' ಬದಲಾವಣೆ ಎಂಬುದು ವ್ಯಕ್ತಿಯ ಜೀವನದಲ್ಲಿ ಹಾಗೂ ಸಂಘ ಸಂಸ್ಥೆಗಳಲ್ಲಿ ಅವಶ್ಯಕವಾಗಿದೆ. ಈ ವಿಷಯಕ್ಕೆ ಸಂಬಂದಪಟ್ಟಂತೆ ಪ್ರತಿ ಸಿಬ್ಬಂದಿಯನ್ನು ಆಯಾ ವೃತ್ತಿಗೆ ಅನುಗುಣವಾಗಿ ಮತ್ತು ಅದೇ ಸಂಘಟನೆಯಲ್ಲಿ ಕೆಲಸ ಮಾಡುವ ಇತರ ಸಿಬ್ಬಂದಿ ಗುಂಪುಗಳ ಸಾಮರ್ಥ್ಯವನ್ನು ಬೆಳೆಸಬೇಕೆಂಬ ಪರಿಕಲ್ಪನೆ ಮೂಡಿಬಂದು, ಎಲ್ಲಾ ಸಂಘ ಸಂಸ್ಥೆಗಳಲ್ಲಿ ಮಾನವ ಸಂಪನ್ಮೂಲ ಅಭಿವೃದಿಯು ಕೇಂದ್ರಬಿಂದುವಾಗಿದೆ. ಪ್ರತಿಯೊಂದು ಕೆಲಸದಲ್ಲಿ ಜಾಣತನ, ಸೃಜನಶೀಲತೆ ವಿಕಸನವಾಗುವುದರ ಜೊತೆಗೆ ಹಣ , ಯಂತ್ರ, ಭೂಮಿ ಮುಂತಾದವುಗಳನ್ನು ಸದ್ಬಳಕೆ ಮಾಡಿಕೊಳ್ಳುವುದಕ್ಕೆ ಅಭಿವೃದ್ಧಿಪಡಿಸುವ ವ್ಯವಸ್ಥೆ ಬಗ್ಗೆ ಚಿಂತನ ಮಂಥನ ಕಾರ್ಯಗಳು ಯಾವುದೇ ಸಂಸ್ಥೆಯಲ್ಲಿ ಪ್ರಾರಂಭವಾದಾಗ ಮಾತ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಯೋಜನೆ ಸಂಘ ಸಂಸ್ಥೆಗಳಲ್ಲಿ ತನ್ನಷ್ಟಕ್ಕೆ ತಾನೆ ಅನುಷ್ಠಾನಕ್ಕೆ ಬರುತ್ತದೆ.

### ಮಾನವ ಅಭಿವೃದ್ಧಿ ಎಂದರೇನು?

ಪ್ರತಿ ವ್ಯಕ್ತಿಯಲ್ಲಿರುವ ಸುಪ್ತಶಕ್ತಿಯನ್ನು ಗುರುತಿಸಿ ಅದಕ್ಕೆ ಚಾಲನೆ ನೀಡಿ ಪ್ರೋತ್ಸಾಹಿಸಿ ಶ್ರೇಯಾತ್ಮಕ ಶಕ್ತಿ ಬಳಕೆಯಾಗುವಂತೆ ಮಾಡಿದ್ದೆ ಅದರ ಪ್ರತಿಯೊಂದು ಸಿಬ್ಬಂದಿ ಯಾವುದೇ ಸಂಘಟನೆಯ ಬೆಳವಣಿಗೆಗೆ ಅಥವಾ ಅಭಿವೃದ್ಧಿಗೆ ಗುಣಮಟ್ಟದ ಸೇವೆಯನ್ನು ಒದಗಿಸಲು ಸಮರ್ಥನಾಗಿರುತ್ತಾನೆ. ಇಂತಹ ಸಿಬ್ಬಂದಿ ಸಂಸ್ಥೆಯ ಆಸ್ತಿಯಾಗಿ ಪರಿಗಣಿಸಲ್ಪಡುತ್ತಾನೆ. ಕ್ರಮೇಣವಾಗಿ ಸೃಜನಶೀಲತೆ ಗುರುತಿಸುವ ಅಥವಾ ಪರಾಮರ್ಶಿಸುವ ಹಾಗೂ ಉಳಿಸಿಕೊಳ್ಳುವ , ಬೆಳೆಸಿಕೊಳ್ಳುವ ವೈಜ್ಞಾನಿಕ ದೃಷ್ಟಿಕೋನವನ್ನು ಇಟ್ಟುಕೊಂಡು ಅವುಗಳಿಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿ ಹಿತಕರ ಬೆಳವಣಿಗೆಗೆ ಅನುವು ಮಾಡಿಕೊಡುವುದೇ ಮಾನವ ಸಂಪನ್ಮೂಲ ಅಭಿವೃದ್ಧಿಯಾಗಿದೆ.

ಸಹಕಾರ ಸಂಸ್ಥೆಗಳನ್ನೊಳಗೊಂಡಂತೆ ಅಗತ್ಯವಿರುವ ಸಾಧನೆ ಸಂಪನ್ಮೂಲಗಳನ್ನು ಒಟ್ಟುಗೂಡಿಸಿ, ಸಮನ್ವಯಗೊಳಿಸಿ ಅಂದರೆ ಮಾನವ ಶಕ್ತಿ, ಹಣ ಸಾಮಾಗ್ರಿ ಸಮಯ ಇವೇ ಮೊದಲಾದ ಸಂಪನ್ಮೂಲದ ಬಳಕೆಯ ಬಗ್ಗೆ ಹೆಚ್ಚು ಒತ್ತು ಕೊಡಲಾಗಿದೆ. ವ್ಯಕ್ತಿಗಳ ಸಾಮರ್ಥ್ಯ ವಿಸ್ತರಣೆಯೇ ಅಭಿವೃದ್ಧಿ ಕೇಂದ್ರ ಬಿಂದುವಾಗಿದೆ. ಸಾಮರ್ಥರ್ಯವೆಂದರೆ ಕ್ರಯೆಗಳ ಒಟ್ಟುರೂಪ ಎನ್ನಬಹುದು. ತಜ್ಞರ ಪ್ರಕಾರ ಮಾನವ ಅಭಿವೃದ್ಧಿಯ ಮಾನದಂಡಗಳು ಆರೋಗ್ಯ ಶಿಕ್ಷಣ ಹಾಗೂ ವರಮಾನ ಅಥವಾ ಉತ್ಪನ್ನ, ಮಾನವ ಅಭಿವೃದ್ಧಿಗೆ ಒಂದಕ್ಕೊಂದು ಪೂರಕವಾಗಿದೆ. ■



# ಸಹಕಾರಿ ಸಂಘಟನೆಗಳಲ್ಲಿ ಪರಿಣಾಮಕಾರಿ ನಾಯಕತ್ವ

▸▸ **ಯಶವಂತ ಡೋಂಗ್ರೆ,** ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ ಮೈಸೂರು.

**"ಸಹಕಾರಿ ಸಂಸ್ಥೆಗಳ ಯಶಸ್ಸಿಗೆ ಅಗತ್ಯವಿರುವುದು ಒಬ್ಬ ದೊಡ್ಡ ನಾಯಕನಲ್ಲ, ಹಲವು ಸಣ್ಣ ನಾಯಕರು" – ವರ್ಗೀಸ್ ಕುರಿಯನ್**

**ಸಹಕಾರಿ ನಾಯಕತ್ವದ ಗುಣಲಕ್ಷಣಗಳು :** ಪರಿಣಾಮಕಾರಿ ಸಹಕಾರಿ ನಾಯಕತ್ವವು ಹಲವು ಅಂಶಗಳ ಸಂಗಮವಾಗಿದೆ. ಕಾಲದಿಂದ ಕಾಲಕ್ಕೆ ಈ ಅಂಶಗಳಲ್ಲಿ ಬದಲಾವಣೆಯಾಗುವುದು ಸಾಧ್ಯವಾದರೂ, ಎಲ್ಲ ಕಾಲಕ್ಕೂ ಸಲ್ಲುವ ಹಲವು ಅಂಶಗಳೂ ಇವೆ. ಅಂತಹ ಮುಖ್ಯ ಅಂಶಗಳನ್ನು ಗಮನಿಸೋಣ.

(ಅ) ಸಹಕಾರಿ ಮಾರ್ಗದ ಬಗ್ಗೆ ಪೂರ್ಣ ನಂಬಿಕೆ ಮತ್ತು ವಿಶ್ವಾಸ (Faith and Confidence) ಅತ್ಯಂತ ಪ್ರಾಥಮಿಕ ಅಂಶ. ಸಹಕಾರಿ ಕ್ಷೇತ್ರವನ್ನು ಬೇರೆ ಪರ್ಯಾಯಗಳಿಲ್ಲದ ಕಾರಣಕ್ಕೆ ಆಯ್ಕೆ ಮಾಡಿಕೊಂಡರೆ ಅಥವಾ ಈ ಕ್ಷೇತ್ರದಲ್ಲಿ ವೈಯಕ್ತಿಕ ಲಾಭಗಳಿವೆ ಎಂಬ ಕಾರಣಕ್ಕಾಗಿ ಆಯ್ಕೆ ಮಾಡಿಕೊಂಡರೆ, ಅಂತಹ ವ್ಯಕ್ತಿಗಳಿಂದ ಉತ್ತಮ ನಾಯಕತ್ವ ದೊರೆಯಲಾರದು. ಸಹಕಾರಿ ಮಾರ್ಗವು ಸಮುದಾಯದ ವಿವಿಧ ಸಮಸ್ಯೆಗಳ ನಿವಾರಣೆಗೆ ಮತ್ತು ವಿವಿಧ ಅಗತ್ಯಗಳ ಪೂರೈಕೆಗೆ ಎಲ್ಲಕ್ಕಿಂತ ಉತ್ತಮ ಮಾರ್ಗ ಎಂಬ ನಂಬಿಕೆ ಮತ್ತು ದೃಷ್ಟಿ ಖಚಿತತೆ (clarity of vision) ಹೊಂದಿದವರು ಮಾತ್ರ ಉತ್ತಮ ನಾಯಕರಾಗಬಲ್ಲರು.

(ಆ) ರಾಜಕೀಯ ಮತ್ತು ಧಾರ್ಮಿಕ ತಟಸ್ಥತೆ (Political and Religious Neutrality) ಸಹಕಾರಿ ನಾಯಕರುಗಳಿಗಿರಬೇಕಾದ ಇನ್ನೊಂದು ಪ್ರಮುಖ ಗುಣ. ಸಹಕಾರವೇ ತನ್ನ ರಾಜಕೀಯ ಮತ್ತು ಧಾರ್ಮಿಕ ನೆಲೆಗಟ್ಟು ಎಂಬ ನಂಬಿಕೆ ಇಲ್ಲದಿದ್ದಲ್ಲಿ ಪರಿಣಾಮಕಾರಿ ಸಹಕಾರಿ ನಾಯಕರಾಗುವುದು ಸಾಧ್ಯವಿಲ್ಲ. ಪಕ್ಷ ಮತ್ತು ಧರ್ಮದ ವಿಧಿಗಳು ನಮ್ಮನ್ನು ಸಂಕುಚಿತ ಚೌಕಟ್ಟಿಗೆ ತಳ್ಳುತ್ತವೆ. ಸಹಕಾರಿ ಸಂಸ್ಥೆಗಳು ಇಂತಹ ಚೌಕಟ್ಟನ್ನು ಮೀರಿದ ಮತ್ತು ಎಲ್ಲರನ್ನು ಸಮಾನ ಪಾಲುದಾರರನ್ನಾಗಿ ನೋಡುವ ಸಂಸ್ಥೆಗಳು. ಆದುದರಿಂದ ಸಹಕಾರಿ ಸಂಘಟನೆಗಳ ನಾಯಕರು ಯಾವುದೇ ರಾಜಕೀಯ ಪಕ್ಷದ, ಧರ್ಮದ ಅಥವಾ ಜಾತಿ ಸಂಘಟನೆಗಳ ಪದಾಧಿಕಾರಿಗಳಾಗಿರಬಾರದು.

(ಇ) ವೃತ್ತಿಪರತೆ (Professionalism) ಉತ್ತಮ ನಾಯಕತ್ವದ ಪ್ರಮುಖ ಗುಣಲಕ್ಷಣಗಳಲ್ಲೊಂದು. ನಾವು ಒಪ್ಪಿಕೊಳ್ಳುವ ಯಾವುದೇ ಜವಾಬ್ದಾರಿಗಳಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ತಿಳಿದಿರುವುದು ಮತ್ತು ಅಂತಹ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಬೇಕಾದ ತಾಂತ್ರಿಕ ಜ್ಞಾನವನ್ನು ಪಡೆದುಕೊಳ್ಳುವುದು ಅತ್ಯಂತ ಮುಖ್ಯ. ಉತ್ತಮ ನಾಯಕನಾಗಬೇಕಾದರೆ ಕೇವಲ ಉತ್ತಮ ಉದ್ದೇಶಗಳಿದ್ದರೆ ಸಾಲದು, ಉತ್ತಮ ಕೌಶಲ ಮತ್ತು ಸರಿಯಾದ ಜ್ಞಾನ ಅತ್ಯಂತ ಅವಶ್ಯಕ.

(ಈ) "ಎರಡನೆ ಮತ್ತು ಮೂರನೆ ಹಂತದ ನಾಯಕರನ್ನು ಸಿದ್ಧಪಡಿಸುವವರೇ ಉತ್ತಮ ನಾಯಕರು" ಎನ್ನುವ ಸಾಮಾನ್ಯ ವ್ಯಾಖ್ಯಾನ ಸಹಕಾರಿ ನಾಯಕತ್ವಕ್ಕೂ ಅನ್ವಯಿಸುತ್ತದೆ. ಪರಿಣಾಮಕಾರಿ ನಾಯಕತ್ವವು ಸಂಸ್ಥೆಯ ದೀರ್ಘಾವಧಿ ಸ್ಥಿರತೆ (Long term stability) ಯನ್ನು ಸಾಧ್ಯವಾಗಿಸಬೇಕು. ಅಂತೆಯೇ ಯಾವೊಬ್ಬ ವ್ಯಕ್ತಿಯು ಸಂಸ್ಥೆಗೆ ಅನಿವಾರ್ಯವಲ್ಲ ಎಂಬ ವಾತಾವರಣವನ್ನು ಮೂಡಿಸುವವರೇ ನಿಜವಾದ ನಾಯಕರು.

(ಉ) ಸಹಕಾರಿ ಸಂಸ್ಥೆಯ ಬೆಳವಣಿಗೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಮತ್ತು ಸಮಯಾಧಾರಿತ (Specific time bond) ಯೋಜನೆಗಳನ್ನು ಹೊಂದಿರುವುದು ನಾಯಕತ್ವದ ಇನ್ನೊಂದು ಪ್ರಮುಖ ಗುಣ. ತಾನು ಸಹಕಾರಿ ಸಂಸ್ಥೆಯ ಪದಾಧಿಕಾರಿಯಾಗಿರುವ ಅವಧಿಯಲ್ಲಿ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು ಮತ್ತು ಅವುಗಳನ್ನು ಯಾವ ಹಂತಕ್ಕೆ ಮುಟ್ಟಿಸಬೇಕು ಎಂಬ ಬಗ್ಗೆ ನಿಖರತೆ ಮತ್ತು ಕಾರ್ಯತಂತ್ರ ನಾಯಕರಲ್ಲಿರಬೇಕು. ಹೀಗಿದ್ದಾಗ ಮಾತ್ರ ಸಹಕಾರಿ ಸಂಘಗಳು ಹಂತ ಹಂತವಾಗಿ ಅಭಿವೃದ್ಧಿ ಹೊಂದುವುದು ಸಾಧ್ಯ.

(ಊ)ಸಹಕಾರಿ ಸಂಸ್ಥೆಗಳು ತನ್ನ ವೈಯಕ್ತಿಕ ಯಶಸ್ಸಿಗೆ ಒಂದು ಮೆಟ್ಟಿಲು ಎಂದು ಭಾವಿಸುವುದಾಗಲಿ ಅಥವಾ ವೈಯಕ್ತಿಕ ಅಪಯಶಸ್ಸಿನ ನಿವಾರಣೆಗೆ ತಾತ್ಕಾಲಿಕ ಆಶ್ರಯ ಎಂದು ಒಪ್ಪಿಕೊಳ್ಳುವುದಾಗಲಿ ಸಹಕಾರಿ ನಾಯಕರ ಗುಣಲಕ್ಷಣಗಳಲ್ಲ. ಸಹಕಾರಿ ಸಂಸ್ಥೆಯಲ್ಲಿನ ತನ್ನ ಪಾತ್ರ ಸಹಕಾರಿ ಸಮುದಾಯದ ಏಳಿಗೆಗಾಗಿ ಮುಡಿಪಾದುದು ಎಂಬ ಭಾವನೆ ಅತಿ ಮುಖ್ಯ.

(ಋ)"ತಾನು ನಾಯಕ ಎಂದು ಭಾವಿಸುವವನು ನಾಯಕನಲ್ಲ, ಇತರರಿಂದ ನಾಯಕ ಎಂದು ಗುರುತಿಸಲ್ಪಡುವವನು ನಾಯಕ" ಎಂಬುದು ನಾಯಕತ್ವದ ಬಗೆಗೆ ಚಾಲ್ತಿಯಲ್ಲಿರುವ ಇನ್ನೊಂದು ಸಾಮಾನ್ಯ ತಿಳುವಳಿಕೆ. ಸಹಕಾರಿ ಸಂಘಟನೆಗಳ ಸಂದರ್ಭದಲ್ಲಿ ಇದು ತುಂಬಾ ಪ್ರಸ್ತುತ. ಪರಿಣಾಮಕಾರಿ ನಾಯಕರು ತಮ್ಮನ್ನು ತಾವು ಇತರರ ಮೇಲೆ ಹೇರಿಕೊಳ್ಳುವುದಿಲ್ಲ ಬದಲಿಗೆ ಹಲವರ

ವಿಶ್ವಾಸದಿಂದ ನಾಯಕರಾಗಿ ಹೊರಹೊಮ್ಮುತ್ತಾರೆ. ಆದುದರಿಂದ ಸಹಕಾರಿ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡು ನಾಯಕರಾಗಿ (Evolved Leaders) ಉತ್ತಮ ನಾಯಕರಾಗುತ್ತಾರೆ. ಆದರೆ ಯಾವುದೇ ಒಂದು ಶಕ್ತಿಯಿಂದಾಗಿ ಹೇರಲ್ಪಡುವವರು (Imposed Leaders) ಉತ್ತಮ ನಾಯಕರಾಗಲಾರರು.

ಮೇಲಿನ ಅಂಶಗಳನ್ನು ಪ್ರತಿ ಸಹಕಾರಿ ಸದಸ್ಯರು ನೆನಪಿನಲ್ಲಿಡಬೇಕು. ಯಾವುದೇ ಯಶಸ್ವಿ ನಾಯಕತ್ವವು ಕೆಲವೇ ಅಂಶಗಳನ್ನು ಅವಲಂಬಿಸಿರುವುದಿಲ್ಲ.

ನಾಯಕತ್ವದ ಅಗತ್ಯಗಳು ಕಾಲ ಮತ್ತು ಸ್ಥಳವನ್ನವಲಂಬಿಸಿ ಬದಲಾಗುತ್ತದೆ. ಹಾಗೆಯೇ ನಾಯಕತ್ವಕ್ಕೆ ಸಂಬಂಧಿಸಿದಂತೆ ನೂರಾರು ಗುಣಲಕ್ಷಣಗಳನ್ನು ಪಟ್ಟಿ ಮಾಡುವುದು ಸಾಧ್ಯವಿದೆ. ಆದುದರಿಂದ ಸಹಕಾರಿ ಸಂಘಟನೆಗಳ ಸಂದರ್ಭದಲ್ಲಿ ಪರಿಣಾಮಕಾರಿ ನಾಯಕತ್ವವು ಸಮೂಹ ನಾಯಕತ್ವವಾಗಿರುತ್ತದೆ (Collective Leadership) ಎಂಬುದನ್ನು ಮತ್ತು ವೈಯಕ್ತಿಕ ಶಕ್ತಿ ಹಾಗೂ ಕೌಶಲ್ಯಕ್ಕಿಂತ ಸಹಕಾರಿ ಸಂಸ್ಥೆಯ ಅನನ್ಯತೆಯ ಅರಿವನ್ನು ಅವಲಂಬಿಸಿರುತ್ತದೆ ಎಂಬುದನ್ನು ಎಲ್ಲ ಸಹಕಾರಿಗಳೂ ನೆನಪಿನಲ್ಲಿರಿಸಿಕೊಳ್ಳಬೇಕು.

■

**ವಿದರ್ಭದಲ್ಲಿ ಕರ್ನಾಟಕ ಅಖಿಲ ಭಾರತೀಯ ಸ್ವಸಹಾಯ ಸ್ತ್ರೀ ಶಕ್ತಿ ಸಂಘಗಳ ರಾಷ್ಟ್ರೀಯ ಅಧಿವೇಶನ ಹಾಗೂ ಕಾರ್ಯಾಗಾರ. – ದಿನಾಂಕ 20 ಮತ್ತು 21 ಸೆಪ್ಟಂಬರ್ 2014**

## ಕೇರಳ ಮತ್ತು ತಮಿಳುನಾಡು ರಾಜ್ಯಗಳ ಅಧ್ಯಯನ ಪ್ರವಾಸದ ವಿವರಗಳು

ಪ್ರವಾದ ಅವಧಿ 7 ದಿನಗಳು, ಭಾಗವಹಿಸುವ ಸಹಕಾರಿಗಳ ಸಂಖ್ಯೆ 30 (ಮೊದಲು ಬಂದವರಿಗೆ ಮೊದಲ ಆದ್ಯತೆ, ನಂತರ ಬಂದವರಿಗೆ ಎರಡನೇ ತಂಡದಲ್ಲಿ ಸೇರಿಸಲಾಗುವುದು.) ಪ್ರವಾಸ 2x2 ಸೀಟಿಂಗ್ ಇರುವ ಪುಷ್‌ಬ್ಯಾಕ್ ಇರುವ ಲಗ್ಜುರಿ ಬಸ್, ಎರಡು ಊಟ, ಒಂದು ಉಪಹಾರ, ಎರಡು ಕಾಫಿ/ಟೀ, ಸಾಮಾನ್ಯ ವಸತಿ ವ್ಯವಸ್ಥೆ. ಸಾಮೂಹಿಕ ಭೋಜನ ವ್ಯವಸ್ಥೆ ಇರುತ್ತದೆ.

ಪ್ರವಾಸ ಶುಲ್ಕ ತಲಾ ಒಬ್ಬರಿಗೆ ರೂ. 10,000 (ಪ್ರವಾಸ ಮುಗಿದ ನಂತರ ಒಟ್ಟಾರೆ ವೆಚ್ಚವನ್ನು ಕೂಡಿದಾಗ ಈಗ ನಿಗಧಿ ಮಾಡಿರುವುದಕ್ಕಿಂತ ಹೆಚ್ಚುವರಿ ವೆಚ್ಚವಾದಲ್ಲಿ ಪ್ರವಾಸದಲ್ಲಿ ಭಾಗವಹಿಸಿದ್ದ ಸೌಹಾರ್ದ ಸಹಕಾರಿಗಳು ಭರಿಸಬೇಕಾಗುತ್ತದೆ.) ನವೆಂಬರ್ ಮಾಹೆಯಲ್ಲಿ ದಿನಾಂಕ ನಿಗಧಿಯಾದ ನಂತರ ಪ್ರವಾಸದಲ್ಲಿ ಭಾಗವಹಿಸುವ ಸಹಕಾರಿಗಳಿಗೆ ಸೂಚನೆ ನೀಡಲಾಗುವುದು.

## ಸೌಹಾರ್ದ ಸಹಕಾರಿಗಳ ಅಧ್ಯಯನ ಪ್ರವಾಸ ದಿನಾಂಕ : 13–9–2014 ರಿಂದ 22–9–2014

ಸೌಹಾರ್ದ ಸಹಕಾರಿಗಳ ನಿರ್ದೇಶಕರ ಗೋವಾ, ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳ ಅಂತರರಾಜ್ಯ 10 ದಿನಗಳ ಅಧ್ಯಯನ ಪ್ರವಾಸವನ್ನು ಇದೇ ದಿನಾಂಕ : 13–9–2014 ರಿಂದ 22–9–2014 ರವರೆಗೆ ವ್ಯವಸ್ಥೆಮಾಡಲಾಗಿದೆ. ಈಗಾಗಲೇ ಹೆಸರು ನೋಂದಾಯಿಸಿದವರು ದಿನಾಂಕ : 13–9–2014ರ ಮಧ್ಯಾಹ್ನ 3–00 ಘಂಟೆಗೆ ಸಂಯುಕ್ತ ಸಹಕಾರಿಗೆ ಬರುವುದು. ಬಸ್ಸು ಸಂಯುಕ್ತ ಸಹಕಾರಿಯ ಕಚೇರಿಯಿಂದ ಸಂಜೆ 5–00 ಗಂಟೆಗೆ ಹೊರಡುತ್ತದೆ.

## 2ನೇ ತಂಡದ ಪ್ರವಾಸಕ್ಕೆ ನೋಂದಣಿ

2ನೇ ತಂಡಕ್ಕೆ ಹೆಸರನ್ನು ನೋಂದಾಯಿಸುವವರು ರೂ 16,500 ಗಳನ್ನು ಪಾವತಿಸಿ.ತಮ್ಮ ಹೆಸರನ್ನು ನೋಂದಾಯಿಸಬಹುದು ಪ್ರವಾಸದ ನಿಗದಿತ ಅಗತ್ಯ ಪ್ರತಿನಿಧಿಗಳ ಸಂಖ್ಯೆ ಪೂರ್ಣಗೊಂಡ ನಂತರ ಪ್ರವಾಸದ ದಿನವನ್ನು ನಿಗದಿಮಾಡಲಾಗುವುದು.

## ನಗರ ಯಶಸ್ವಿನಿ : ನೋಂದಣೆಯ ಅವಧಿ ವಿಸ್ತರಣೆ

ಯಶಸ್ವಿನಿ ನಗರ ಆರೋಗ್ಯ ರಕ್ಷಣಾ ಯೋಜನೆಯ ನೋಂದಣೆಯ ಅವಧಿಯನ್ನು ದಿನಾಂಕ : 30–09–2014 ರವರೆಗೆ ವಿಸ್ತರಿಸಿ ರಾಜ್ಯ ಸರಕಾರ ಅಧಿಸೂಚನೆಯನ್ನು ಹೊರಡಿಸಿದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಈ ಅವಕಾಶವನ್ನು ಸದುಪಯೋಗಮಾಡಿಕೊಳ್ಳಲು ಸಂಯುಕ್ತ ಸಹಕಾರಿಯು ಸೂಚಿಸಿದೆ.



# ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರತೆಯ ವ್ಯವಹಾರ ಮಾನವ ಸಂಪನ್ಮೂಲ ಹಾಗೂ ಗ್ರಾಹಕರ ಸಂಬಂಧ ನಿರ್ವಹಣೆಯ ಪಾತ್ರ ಮತ್ತು ಮಹತ್ವ

– ಡಾ॥ ನಂದೀಶ ವಿ. ಹಿರೇಮಠ
ಹಿರಿಯ ಬೋಧಕರು, ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ತರಬೇತಿ ಸಂಸ್ಥೆ (ಎನ್.ಐ.ಆರ್.ಬಿ) ಬೆಂಗಳೂರು.

...ಹಿಂದಿನ ಸಂಚಿಕೆಯಿಂದ

**2) ವಾಸ್ತವತೆ (Reality) :** ಪ್ರಸಕ್ತ ಪರಿಸ್ಥಿತಿಯ ಇತಿ–ಮಿತಿಗಳು, ಅಡ್ಡಿ–ಆತಂಕಗಳು, ಶಕ್ತಿ–ಸಾಮರ್ಥ್ಯಗಳು, ಸಾಮಾಜಿಕ–ಆರ್ಥಿಕ ಬದಲಾವಣೆಗಳು ಮುಂತಾದವನ್ನು ಗಮನದಲ್ಲಿಟ್ಟುಕೊಂಡು ಯೋಜನೆ ನಿರೂಪಿಸಿ ಕಾರ್ಯಗತರಾಗಬೇಕು. ಜನಸಮುದಾಯದ ಒಳಿತು ಹಾಗೂ ವಸ್ತು ಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಭವಿಷ್ಯದ ರೂಪರೇಷೆಗಳನ್ನು ನಿರ್ಮಿಸಬೇಕು.

**3) ಮೌಲ್ಯಧಾರಿತ ಆಡಳಿತ (Value based Administration) :** ಸಹಕಾರಿ ಸಂಸ್ಥೆಗಳು ಎಂದಿಗೂ ತಮ್ಮ ಸಪ್ತ ತತ್ವಗಳನ್ನು ಮರೆಯದೆ, ಮಾನವೀಯ ಮೌಲ್ಯಗಳಿಗೆ ಧಕ್ಕೆಯಾಗದಂತೆ, ತಮ್ಮ ಸದಸ್ಯ ಹಾಗೂ ಗ್ರಾಹಕರ ಅಭವೃದ್ಧಿಯನ್ನು ಮೂಲಮಂತ್ರವಾಗಿಟ್ಟುಕೊಂಡು ಆಡಳಿತ ನಿರ್ವಹಿಸಬೇಕು.

**4) ಸ್ಥಿರತೆ (Stability) :** ಯಾವಾಗ ಯೋಚನೆಗಳು, ವಾಸ್ತವತೆಗೆ ತಕ್ಕಂತೆ ಸ್ಪಷ್ಟತೆಯಿಂದ ಹಾಗೂ ಮೌಲ್ಯಗಳ ತಳಹದಿ ಯೊಂದಿಗೆ ಕಾರ್ಯರೂಪಕ್ಕೆ ತಂದಾಗ ಸಂಸ್ಥೆಗಳ ಸ್ಥಿರತೆ ಭದ್ರಗೊಳ್ಳುತ್ತದೆ. ಲಾಭಗಳು ಏರಿದಂತೆ ಅಭವೃದ್ಧಿ ಹೆಚ್ಚಾಗುತ್ತದೆ. ತದನಂತರ ಸ್ಥಿರತೆ ಇನ್ನೂ ಭದ್ರವಾಗುತ್ತದೆ.

**5) ವೃತ್ತಿಪರತೆ (Professionalism) :** ಈ ಮೇಲೆ ಕಾಣಿಸಿದ ನಾಲ್ಕು ವಿಷಯಗಳು ಭದ್ರವಾಗಿ ನೆಲೆಯೂರಬೇಕಾದರೆ ಸಂಸ್ಥೆಗಳ ಪ್ರತಿ ವಿಭಾಗದಲ್ಲೂ, ಪ್ರತಿಹಂತದಲ್ಲೂ, ವೃತಿಪರತೆಯ ಮೆರಗು ಸದಾ ಇರಬೇಕು. ವೃತಿಪರತೆ ಎಂದರೆ ಯೋಚನೆ ಮಾಡಿ, ಯೋಜನೆ ಹಾಕಿಕೊಂಡು, ಅಂತಿಮ ಗುರಿಯನ್ನು ದೃಷ್ಟಿಯಲ್ಲಿಟ್ಟು ಕೊಂಡು ಕಡಿಮೆ ಖರ್ಚಿನಲ್ಲಿ ಉತ್ಕೃಷ್ಟ ಗುಣಮಟ್ಟದ ಸೇವೆಯನ್ನು ತಕ್ಕ ಸಮಯದಲ್ಲಿ ನೀಡುವುದು. ಆದನ್ನೇ QCD Philosophy ಅಂತಾ ಹೇಳುತ್ತಾರೆ. ಅಂದರೆ ಪ್ರತಿ ಕಾರ್ಯದಲ್ಲಿ High Quality, Low Cost & Timely Delivery ಪ್ರಾಮುಖ್ಯತೆಗಳಿಸುತ್ತದೆ.

### 2.1 ನಿಧ್ಧಿ / ಬಂಡವಾಳ ಸಂಗ್ರಹಣೆ ಹಾಗೂ ನಿರ್ವಹಣೆ (Resource Mobilisation and Management) :

- ನಿಧ್ಧಿ ಸಂಗ್ರಹಣೆಗೆ ಮೊದಲ, ವ್ಯವಹಾರಿಕ ಯೋಜನೆ (Business plan) ತಯಾರಿಸಬೇಕು.
- ವ್ಯವಹಾರಿಕ ಯೋಜನೆ ಪ್ರಕಾರ ಬೇಕಾದಷ್ಟು ಹಣವನ್ನು ಮಾತ್ರ ಸಂಗ್ರಹಿಸಬೇಕು.
- ಹೆಚ್ಚಿನ ವ್ಯವಹಾರ–ಕಡಿಮೆ ಲಾಭಂಶ (High volume-Low Margin) ಅಥವಾ ಕಡಿಮೆ ವ್ಯವಹಾರ–ಹೆಚ್ಚಿನ ಲಾಭಂಶ (Low volume-High-Margin) ತತ್ವಗಳಲ್ಲಿ, ಯಾವುದನ್ನು ಅಳವಡಿಸಿಕೊಳ್ಳಬೇಕು ಎಂಬ ಬಗ್ಗೆ ಸ್ಪಷ್ಟತೆ ಇರಬೇಕು.
- ಸಾಲ ತೆಗೆದುಕೊಳ್ಳುವ ಸದಸ್ಯ (Borrowing Members) ರಿಂದ ಹೆಚ್ಚಿನ ಷೇರು ಹಣ ಶೇಖರಿಸಬೇಕು ಹಾಗೂ ಈ ಸದಸ್ಯರ ಸಂಖ್ಯೆಯನ್ನು ಅಭಿವೃದ್ಧಿಪಡಿಸಬೇಕು.
- ಠೇವಣಿ ಸಂಗ್ರಹಣೆ ಮಾಡುವಾಗ 16% ರಷ್ಟನ್ನು ಚಾಲ್ತಿ ಖಾತೆಗಳಿಂದ (Current A/c) 21% ಹೆಚ್ಚಿನ ರಷ್ಟುನ್ನು ಉಳಿತಾಯ ಖಾತೆಗಳಿಂದ (Savings A/c ) 63% ರಷ್ಟುನ್ನು ದ್ಧೀರ್ಘಾವದ್ಧಿ (Term fixed Deposit A/c) ಖಾತೆಗಳಿಂದ ಕ್ರೋಢೀಕರಿಸಲು ಪ್ರಯತ್ನ ಪಡೆಬೇಕು.
- ಪುನರ್ಧನ (Refinace) ಪಡೆಯುವ ಮೊದಲು ಅದರ ಖರ್ಚು ಸ್ವಂತ ನಿಧ್ಧಿಗಿಂತ ಕಡಿಮೆ ಇದ್ದರೆ ತೆಗೆದುಕೊಳ್ಳಬೇಕು. ಇಲ್ಲವಾದರೆ ಕನಿಷ್ಟ ಮಾತ್ರವನ್ನು ಪಡೆಯಬೇಕು.
- ಬೇರೆ ಬೇರೆ ಮೂಲಗಳಿಂದ ನಿಧ್ಧಿ ಸಂಗ್ರಹಣೆ ಮಾಡಬೇಕು.

### 2.2. ಸಾಲ ವಿತರಣೆ (Loans & Advances) :

- ವಿವಿಧ ಕ್ಷೇತ್ರಗಳಿಗೆ ಸಾಲ ವಿತರಿಸುವ ಮೊದಲು ಲಾಭ–ನಷ್ಟಗಳ ಪರಿಪೂರ್ಣ ವಿಶ್ಲೇಷಣೆ ಮಾಡಿ ವ್ಯವಹಾರಿಕ ಯೋಜನೆ. ತಯಾರಿಸಬೇಕು.
- ಆಯಾ ಪ್ರದೇಶದ ಶಕ್ತಿ–ಸಾಮರ್ಥ್ಯಕ್ಕೆ ಅನುಗುಣವಾಗಿ ಕೃಷಿ, ಕೈಗಾರಿಕೆ, ಸಣ್ಣ ಉದ್ದಿಮೆ, ಗೃಹೋಪಯಾಗಿ, ಮನೆ ಕಟ್ಟಲು, ವಾಹನ ಖರೀದಿಸಲು, ಮುಂತಾದ ವಿವಿಧ ಉದ್ದೇಶಗಳಿಗೆ (Diversified purposes) ಸಾಲ ವಿತರಣೆ ಮಾಡಬೇಕು.
- ಸಾಲ ನೀಡುವ ಮೊದಲು ಗುಣಾತ್ಮಕ ವಿಶ್ಲೇಷಣೆಗೆ (Quality Appraisal) ಸಾಲ ನೀಡುವ ಕ್ರಿಯೆಯ ಶೇ.50 ರಷ್ಟು ಮಹತ್ವ ನೀಡಬೇಕು.
- ಸಾಲ ವಿತರಣೆಯಲ್ಲಿ ಖರ್ಚು ಕಡಿಮೆ ಮಾಡಲು ವಿನಾಯಿತಿ ಸಾಲಗಳನ್ನು 3% ಸಣ್ಣ ಸಾಲಗಳನ್ನು (ರೂ.5,000 ಹಾಗೂ

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1744/2014-16.
RNI No. KARBIL - 2004/18001. Pages 20

# ಡಾ. ಬಿ.ಎಸ್. ವಿಶ್ವನಾಥನ್ ಸಭಾಂಗಣ ಉದ್ಘಾಟನೆ

**ಬೆಂಗಳೂರು :** ಸಹಕಾರಿ ಕ್ಷೇತ್ರದಲ್ಲಿ ರಾಜಕಾರಣ ನುಸುಳಿದರೆ ಕ್ಷೇತ್ರ ಪ್ರಗತಿ ಸಾಧಿಸಲು ಸಾಧ್ಯವಿಲ್ಲ ಎಂದು ಸಚಿವ ಆರ್.ವಿ. ದೇಶಪಾಂಡೆ ಹೇಳಿದರು. ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಆವರಣದಲ್ಲಿ ಡಾ. ವಿಶ್ವನಾಥನ್ ಸಭಾಂಗಣ ಉದ್ಘಾಟಿಸಿ ಮಾತನಾಡಿದರು. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಕೈಜೋಡಿಸಬೇಕು, ಇದರಿಂದ ಪ್ರಗತಿ ಸಾಧ್ಯ ಎಂದರು.

ಸಹಕಾರ ಕ್ಷೇತ್ರದಲ್ಲಿ 50 ವರ್ಷ ಸೇವೆ ಸಲ್ಲಿಸುವುದು ಸುಲಭವಲ್ಲ. ಬದಲಾಗುವ ರಾಜಕೀಯ ವ್ಯವಸ್ಥೆ ಸೇರಿ ಇತರೆ ಪ್ರಭಾವಗಳಿಂದ ಸೇವೆ ಸಲ್ಲಿಸುವುದು ಕಷ್ಟವಾಗಿರುವಾಗ ವಿಶ್ವನಾಥನ್ ಸಹಕಾರ ಚಳವಳಿಯಲ್ಲಿ 50 ವರ್ಷ ಪೂರೈಸಿರುವುದು ಶ್ಲಾಘನೀಯ ಎಂದು ತಿಳಿಸಿದರು. ವಿಧಾನ ಪರಿಷತ್ ಸದಸ್ಯ ಶ್ರೀ ಮರಿತಿಬ್ಬೇಗೌಡ ಅವರು ಡಾ. ವಿಶ್ವನಾಥನ್ ಸಾಧನೆಯ ಹಾದಿ ವಿವರಿಸಿದರು. ಬ್ಯಾಂಕ್ ಅಧ್ಯಕ್ಷ ಶ್ರೀ ಎ.ಆರ್. ಶಿವರಾಮ್, ನಬಾರ್ಡ್ ಬ್ಯಾಂಕ್‌ನ ಪ್ರಾಂತೀಯ ಮಹಾ ಪ್ರಬಂಧಕ ಡಾ. ಜಿ.ಆರ್. ಚಿಂತಾಲ, ಮಾಜಿ ಸಚಿವರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಶ್ರೀಮತಿ ರಾಣಿ ಸತೀಶ್ ಹಾಗೂ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಡಾ. ಬಿ.ಎಸ್. ವಿಶ್ವನಾಥನ್ ಅವರನ್ನು ಸಚಿವ ಶ್ರೀ ಆರ್.ವಿ. ದೇಶಪಾಂಡೆ ಸನ್ಮಾನಿಸಿದರು.**

ಕಡಿಮೆ) 15% ಮಧ್ಯಮ ಸಾಲ (ರೂ.25,000 ದಿಂದ ರೂ.2 ಲಕ್ಷದವರಿಗೆ) ಗಳನ್ನು 35%, ದೊಡ್ಡ ಸಾಲ (ರೂ.2 ರಿಂದ 5 ಲಕ್ಷದವರಿಗೆ) ಗಳನ್ನು 37% ಮತ್ತು ಅತಿ ದೊಡ್ಡ ಸಾಲ (ರೂ.10 ಲಕ್ಷಕ್ಕಿಂತ ಹೆಚ್ಚು) ಗಳನ್ನು 10% ಮಿತಿಗೆ ಮೀರಿದಂತೆ ನೀಡುಬೇಕು.

- ಸಾಲ ನೀಡಿದ ನಂತರ ತಪ್ಪದೆ ಅದರ ಉಪಯೋಗವನ್ನು ಕೊಟ್ಟು ಉದ್ದೇಶಕ್ಕೆ ಬಳಸಲಾಗಿದೆಯೇ ಇಲ್ಲವೇ ಎಂಬುದನ್ನು ಖಾತರಿಗೊಳಿಸಿಕೊಳ್ಳಬೇಕು.
- ಸಾಲ ನೀಡಿದ ನಂತರ ಗ್ರಾಹಕರ ಜೊತೆ ಸತತ ಸಂಪರ್ಕ ಇಟ್ಟುಕೊಂಡು ಮರುಪಾವತಿ ವೇಳೆಗನುಸಾರ ಬರುವಂತೆ ಕಾಳಜಿ ವಹಿಸಬೇಕು, ಇಲ್ಲವಾದರೆ ಅದು ನಿಷ್ಕ್ರಿಯ ಆಸ್ತಿ (Non-Performing Asset, NPA) ಆಗಿ ಮಾರ್ಪಾಡಾಗುವಲ್ಲಿ ಅವಕಾಶವಾಗುತ್ತದೆ.

### 2.3 ಬಂಡವಾಳ ಹೂಡಿಕೆ ನಿರ್ವಹಣೆ (Investment Management) :

- ಇರುವ ಬಂಡವಾಳದಲ್ಲಿ, 4% ಕೈ ಹಣ, 3% NPA Provisions, ಸಾಲ ವಿತರಣೆ 50%, ಬಂಡವಾಳ ಹೂಡಿಕೆಗೆ 34%, ಇತರೆ ಸಾಲಗಳಿಗೆ 5% ಮತ್ತು ಇತರೆ ಆಸ್ತಿಗಳಿಗಾಗಿ (ವಾಹನ, ಕಟ್ಟಡ ಮುಂ,) 4% ರಷ್ಟು ಮೀಸಲಾಗಿಡಬೇಕು, ಅಂತಾ ಹಣಕಾಸು ತಜ್ಞರು ತಿಳಿಸುತ್ತಾರೆ. ಇದನ್ನು ಆದಷ್ಟು ಮಟ್ಟಿಗೆ ಪಾಲಿಸಬೇಕು. ಬಂಡವಾಳ ಹೂಡಿಕೆಗೆ ಅವಕಾಶ ಇಲ್ಲದಿದ್ದರೆ ಅಥವಾ ಅದರ ಲಾಭಂಶ ಕಡಿಮೆ ಇದ್ದಲ್ಲಿ, ಸಾಲ ವಿತರಣೆ ಭಾಗವನ್ನು ಹೆಚ್ಚಿಗೆ ಮಾಡಬೇಕು.
- ಬಂಡವಾಳ ಹೂಡಿಕೆಯನ್ನು ಒಂದೇ ಸಂಸ್ಥೆ ಅಥವಾ ಒಂದೇ ರೀತಿ ಹೂಡಿಕೆಯಲ್ಲಿ ತೊಡಗಿಸಬಾರದು ಬದಲಾಗಿ ಬೇರೆ ಬೇರೆ ರೀತಿಯಲ್ಲಿ ತೊಡಗಿಸಿದಾಗ ಏನಾದರೂ ನಷ್ಟವಾದರೆ ಅದರ ವಿಪರೀತ ಪ್ರಭಾವ ಸಂಸ್ಥೆಯ ವ್ಯವಹಾರದ ಮೇಲೆ ಆಗುವುದಿಲ್ಲ.

(ಮುಂದಿನ ಸಂಚಿಕೆಗೆ...)

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವಿಭಾಗೀಯ ಕಛೇರಿ #436, ಮೊದಲನೆಯ ಮಹಡಿ, ಹಯಿಲಗೋಳ ಕಟ್ಟಡ ಶನಿ ಮಂದಿರ ಹತ್ತಿರ, ಪಾಟೀಲ ಗಲ್ಲಿ, ಬೆಳಗಾವಿ-590001 ದೂ.ಸಂ : 0831-2401551.
ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಗುಲ್ಬರ್ಗಾ ನಂ 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ - 585102. ದೂ. 08472-270222.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010